ಕನ್ನಡ ಮತ್ತು ಸಂಸ್ಕೃತಿ ಇಲಾಖೆ

**ಸ್ವಾತಂತ್ರ್ಯ ಅಮೃತ ಮಹೋತ್ಸವ ಪುಸ್ತಕ ಮಾಲೆ**

**ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ**

# ತಾವರೆಕೆರೆ

ಪ್ರಧಾನ ಸಂಪಾದಕರು
**ಡಾ. ಬಿ.ವಿ. ವಸಂತಕುಮಾರ್**

ಸಂಪಾದಕರು
**ಡಾ. ಮೃತ್ಯುಂಜಯ ರುಮಾಲೆ**

ಲೇಖಕರು
**ಪ್ರೊ ಕೆ. ಪುಟ್ಟರಂಗಪ್ಪ**

**ಕರ್ನಾಟಕ ಸಾಹಿತ್ಯ ಅಕಾಡೆಮಿ**
ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು-೫೬೦ ೦೦೨
ದೂರವಾಣಿ: ೦೮೦-೨೨೨೧೧೭೩೦ / ೨೨೧೦೬೪೬೦
www.karnatakasahithyaacademy.org
ಇ-ಮೇಲ್: sahithya.academy@gmail.com

**TAVAREKERE:** An Introduction Book on Places in Karnataka that Played a Major Role in the Freedom Struggle, Written by Prof. K. Puttarangappa, Published by Kariyappa N., Registrar, Karnataka Sahithya Academy, Kannada Bhavana, J.C. Road, Bengaluru-560002

ಹಕ್ಕು: ಕರ್ನಾಟಕ ಸಾಹಿತ್ಯ ಅಕಾಡೆಮಿ

**ಪ್ರಧಾನ ಸಂಪಾದಕರು**

ಡಾ. ಬಿ.ವಿ. ವಸಂತಕುಮಾರ್

ಅಧ್ಯಕ್ಷರು, ಕರ್ನಾಟಕ ಸಾಹಿತ್ಯ ಅಕಾಡೆಮಿ

**ಸಂಪಾದಕ ಮಂಡಳಿ**

ಡಾ. ಎಸ್. ಜಿ. ರಾಮದಾಸ ರೆಡ್ಡಿ

ಡಾ. ಮೃತ್ಯುಂಜಯ ರುಮಾಲೆ

ಶ್ರೀ ನರೇಂದ್ರಕುಮಾರ್ ಎಸ್.ಎಸ್.

ಡಾ. ಪ್ರಕಾಶ ಗ. ಖಾಡೆ

ಶ್ರೀಮತಿ ಕೋಡಿಬೆಟ್ಟು ರಾಜಲಕ್ಷ್ಮಿ

**ಲೇಖಕರು**

ಪ್ರೊ ಕೆ. ಪುಟ್ಟರಂಗಪ್ಪ

ಮುದ್ರಣ: ೨೦೨೨

ಪ್ರತಿಗಳು: ೧೦೦೦

ಬೆಲೆ: ರೂ. ೩೦/-

ಪುಟ: ೫೬

ಮುಖಪುಟ ಚಿತ್ರ: ಮುರಳೀಧರ ವಿ. ರಾಥೋಡ್

ಪ್ರಕಾಶಕರು:

ಕರಿಯಪ್ಪ ಎನ್., ರಿಜಿಸ್ಟ್ರಾರ್

ಕರ್ನಾಟಕ ಸಾಹಿತ್ಯ ಅಕಾಡೆಮಿ

ಮುದ್ರಕರು

**ರಶ್ಮಿ ಪ್ರಿಂಟರ್ಸ್**

ಸುಧಾಮನಗರ, ಬೆಂಗಳೂರು

ಮೊ: ೯೯೦೧೯೧೬೫೮೧

**ಬಸವರಾಜ ಬೊಮ್ಮಾಯಿ**

ಮುಖ್ಯಮಂತ್ರಿ

ವಿಧಾನಸೌಧ

ಬೆಂಗಳೂರು–560 001



## ಶುಭ ಸಂದೇಶ

ಭಾರತ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭದಲ್ಲಿ ದೇಶದಾದ್ಯಂತ ದೇಶಪ್ರೇಮವನ್ನು ಬೆಳೆಸುವ ಸಾವಿರಾರು ಕಾರ್ಯಕ್ರಮಗಳು ನಡೆಯುತ್ತಿರುವ ಹೊತ್ತಿನಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಕರ್ನಾಟಕದ ೩೧ ಜಿಲ್ಲೆಗಳಲ್ಲಿ ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿರುವ ೭೫ ಸ್ಥಳಗಳನ್ನು ಗುರುತಿಸಿ, ೭೫ ಪುಸ್ತಕಗಳನ್ನು ಹೊರತರುತ್ತಿರುವುದು ಸಂತೋಷದ ವಿಚಾರ.

ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಕರ್ನಾಟಕದ ಕೊಡುಗೆ ಬಹಳ ಮಹತ್ವದ್ದು. ಕರ್ನಾಟಕದ ಹಲವು ಮಹನೀಯರು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕಾಗಿ ನಡೆಸಿದ ತ್ಯಾಗ ಬಲಿದಾನಗಳು ಅಪಾರ. ಅಂತೆಯೇ ಕರ್ನಾಟಕದ ಸಾವಿರಾರು ಸ್ಥಳಗಳು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿ ನಿಂತಿವೆ. ವಿದುರಾಶ್ವತ್ಥ, ಈಸೂರು, ಶಿವಪುರಗಳನ್ನೂ ಒಳಗೊಂಡಂತೆ ಕರ್ನಾಟಕದ ೩೧ ಜಿಲ್ಲೆಗಳ ಸಾವಿರಾರು ಸ್ಥಳಗಳಲ್ಲಿ ಭಾರತದ ಸ್ವಾತಂತ್ರ್ಯ ಸಂಗ್ರಾಮವು ನಡೆದುದಕ್ಕೆ ಸಾಕ್ಷಿಯಾಗಿ ಹಲವಾರು ಕುರುಹುಗಳು, ಅವಶೇಷಗಳು, ಸ್ಮಾರಕಗಳು ಇತಿಹಾಸದ ಪುಟಗಳಲ್ಲಿ ದಾಖಲಾಗಿವೆ. ಆದಾಗ್ಯೂ ಇನ್ನೂ ದಾಖಲಾಗಬೇಕಾದ ಸಂಗತಿಗಳು ಉಳಿದಿವೆ. ಭಾರತ ಸ್ವಾತಂತ್ರ್ಯದ ಅಮೃತೋತ್ಸವದ ಸಂದರ್ಭದಲ್ಲಿ ಈ ಎಲ್ಲ ಅಂಶಗಳನ್ನು ದಾಖಲಿಸುವ ಕೆಲಸ ತುರ್ತಾಗಿ ಆಗಬೇಕಾಗಿದೆ.

ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿರುವ ಕರ್ನಾಟಕದ ವಿವಿಧ ಸ್ಥಳದಲ್ಲಿ ನಡೆದ ಘಟನೆಗಳು, ತ್ಯಾಗ, ಬಲಿದಾನಗಳು, ಹೋರಾಟಗಳು ಇತ್ಯಾದಿ

ವಿವರಗಳೆಲ್ಲವನ್ನೂ ಪುಸ್ತಕ ರೂಪದಲ್ಲಿ ದಾಖಲಿಸುವ ಮೂಲಕ, ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಕೊಡುಗೆಯ ಮೇಲೆ ಬೆಳಕು ಚೆಲ್ಲುವ ಪ್ರಯತ್ನವನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿ ಮಾಡಿದೆ. ಇದು ನಿಜಕ್ಕೂ ಒಂದು ಸಂಶೋಧನಾತ್ಮಕ ಪ್ರಯತ್ನವೇ ಸರಿ.

ಈ ಸಾರ್ಥಕ ಕಾರ್ಯವನ್ನು ಯಶಸ್ವಿಗೊಳಿಸಿದ ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷರು ಹಾಗೂ ಬಳಗದವರನ್ನು ನಾನು ಮನಃಪೂರ್ವಕವಾಗಿ ಅಭಿನಂದಿಸುತ್ತೇನೆ.

ಎಲ್ಲರಿಗೂ ಭಾರತ ಸ್ವಾತಂತ್ರ್ಯ ಅಮೃತ ಮಹೋತ್ಸವದ ಶುಭಾಶಯಗಳು.

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ
ಕರ್ನಾಟಕ ಸರ್ಕಾರ

**ವಿ ಸುನಿಲ್ ಕುಮಾರ್**

ಸ್ವಾತಂತ್ರ್ಯದ ಅಮೃತಮಹೋತ್ಸವ

ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು



# ಶುಭ ಸಂದೇಶ

**‘ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ’**

ಜಗತ್ತಿನಲ್ಲಿ ಭಾರತ ಒಂದು ವಿಶಿಷ್ಟವಾದ ಮಹತ್ವದ ರಾಷ್ಟ್ರ. ವಿಶ್ವಕ್ಕೆ ವಿಶ್ವಮಾನವನನ್ನು, ವಿಶ್ವಕುಟುಂಬವನ್ನು, ವಿಶ್ವನಾಥನನ್ನು, ಜಗನ್ಮಾತೆಯನ್ನು ನೀಡಿರುವ ಆಧ್ಯಾತ್ಮದ ಪುಣ್ಯಭೂಮಿ. ವೇದ, ಉಪನಿಷತ್ತುಗಳ ಕಾಲದಿಂದ ಹಿಡಿದು, ರಾಮ, ಕೃಷ್ಣ, ಶಿವ, ಬುದ್ಧ, ಬಸವ, ಗಾಂಧಿ, ಅಂಬೇಡ್ಕರ್, ಮೈತ್ರೇಯಿ, ಗಾರ್ಗಿ, ಅರುಂಧತಿ, ಸೀತೆ, ಮಂಡೋದರಿ, ಮೀರಾ, ಅಕ್ಕಮಹಾದೇವಿ ಮೊದಲಾದ ಪೌರಾಣಿಕ, ಐತಿಹಾಸಿಕ ವ್ಯಕ್ತಿತ್ವಗಳ ಅಂತಃಶಕ್ತಿಯಿಂದ ಜಗತ್ತನ್ನು ಬೆಳಗಿದ ದೇಶ ಭಾರತ. ಇಂಥ ದೇಶದ ಮೇಲೆ ಅಲೆಗ್ಸಾಂಡರನಿಂದ ಹಿಡಿದು ಮೊಘಲರಾದಿಯಾಗಿ ಬ್ರಿಟಿಷರವರೆಗೆ ಆಕ್ರಮಣ ಮಾಡಲು ಪ್ರಯತ್ನಿಸಿ, ಸೋತು ಭಾರತೀಯ ಸಂಸ್ಕೃತಿಯ ಅಗಾಧತೆಗೆ ಶರಣಾಗಿ ಭಾರತೀಯರೇ ಆಗಿಹೋಗಿದ್ದಾರೆ. ಹಾಗೇ ಭಾರತವನ್ನು ಭಾರತವನ್ನಾಗಿ ಉಳಿಸಿರುವ ಮಹಾನ್ ಶಕ್ತಿಯೇ ಸ್ವಾತಂತ್ರ್ಯದ ತೀವ್ರ ತುಡಿತ.

ಭಾರತದ ಸ್ವಾತಂತ್ರ್ಯ ಸಂಗ್ರಾಮ ಸುಮಾರು ಮುನ್ನೂರು ವರ್ಷಗಳಿಗೂ ಹಳೆಯದು. ಇಡೀ ಭಾರತವೇ ಬ್ರಿಟಿಷರ ವಿರುದ್ಧ ಹೋರಾಡಿ ದಾಸ್ಯದಿಂದ ಮುಕ್ತವಾಗಿ ಸ್ವಾತಂತ್ರ್ಯವನ್ನು ಪಡೆದುಕೊಂಡು ಈಗ ೭೫ ವರ್ಷಗಳಾಗಿವೆ. ಈ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭವನ್ನು ಅರ್ಥಪೂರ್ಣವಾಗಿ ಆಚರಿಸಬೇಕಾದ್ದು ನಮ್ಮೆಲ್ಲರ ಕರ್ತವ್ಯ.

ಇಡೀ ದೇಶವನ್ನೇ ಜಾಗೃತಗೊಳಿಸಿದ ಭಾರತದ ಸ್ವಾತಂತ್ರ್ಯ ಸಂಗ್ರಾಮ,

ನಮ್ಮ ಕರ್ನಾಟಕದಲ್ಲಿಯೂ ಸಹ ಸ್ವಾತಂತ್ರ್ಯ ಸಂಗ್ರಾಮದ ಪಾಂಚಜನ್ಯವನ್ನು ಮೊಳಗಿಸಿತು. ಕರ್ನಾಟಕದ ಕಲಿಗಳು ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿ, ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ವಿಶಿಷ್ಟ ಕೊಡುಗೆ ನೀಡಿರುವುದನ್ನು ಸ್ಮರಿಸಬೇಕಿದೆ. ಕರ್ನಾಟಕದಲ್ಲಿ ಸಾವಿರಾರು ಸ್ವಾತಂತ್ರ್ಯ ಹೋರಾಟದ ಘಟನೆಗಳನ್ನು ಸಾರುವ ಐತಿಹಾಸಿಕ ಸ್ಥಳಗಳಿವೆ. ಅಂಥ ಸ್ಥಳಗಳು ಅರಿವಿಗೆ ಬಾರದೆ ಮರೆಯಾಗಿ ಹೋಗುತ್ತಿವೆ. ಸ್ವಾತಂತ್ರ್ಯದ ಹಣತೆ ಹೊತ್ತಿಸಿದ ಪ್ರಮುಖ ಸ್ಥಳಗಳಲ್ಲಿ ತ್ಯಾಗ, ಬಲಿದಾನಗಳನ್ನು ನೆನಪಿಸುವ ನಿಟ್ಟಿನಲ್ಲಿ ಮತ್ತು ಇಂದಿನ ಪೀಳಿಗೆಗೆ ತಿಳಿಸಿಕೊಡುವ ಕೆಲಸ ಈ ಅಮೃತ ಮಹೋತ್ಸವದ ಸಂದರ್ಭದಲ್ಲಿ ಆಗುತ್ತಿರುವುದು ಸಂತಸದ ವಿಷಯ. ಈ ನಿಟ್ಟಿನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಒಂದು ಬೃಹತ್ ಆಂದೋಲನವನ್ನು ಹಮ್ಮಿಕೊಂಡಿದೆ. ಅದರ ಅಂಗವಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಐತಿಹಾಸಿಕ ಮಹತ್ವಗಳನ್ನು ತಿಳಿಸಿಕೊಡುವ ೭೫ ಸ್ಥಳಗಳ ಬಗ್ಗೆ ೭೫ ವಿವಿಧ ಲೇಖಕರಿಂದ ಒಟ್ಟು ೭೫ ಪುಸ್ತಕಗಳನ್ನು, ಅದರ ತಲಾ ೧೦೦೦ ಪ್ರತಿಯಂತೆ ೭೫೦೦೦ ಪ್ರತಿಗಳನ್ನು ಎರಡು ತಿಂಗಳಲ್ಲಿ ಬರೆಯಿಸಿ, ಮುದ್ರಿಸಿ ಓದುಗರಿಗೆ ತಲುಪಿಸುತ್ತಿರುವುದು ನಿಜಕ್ಕೂ ಹೆಮ್ಮೆಯ ವಿಷಯ. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರತಿಯೊಬ್ಬರನ್ನೂ ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ.

ನಾವೆಲ್ಲರೂ ಕೂಡಿ ನಮ್ಮ ನಮ್ಮ ಮನೆಮನಗಳಿಂದ ನಾಡು, ನುಡಿ, ಸಾಹಿತ್ಯ, ಸಂಸ್ಕೃತಿ, ಪರಂಪರೆಗಳನ್ನು ಬೆಳೆಸೋಣ. ರಸಋಷಿ ಕುವೆಂಪು ಅವರು ಹೇಳಿರುವ 'ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ' ಎಂಬ ಆದರ್ಶದೊಂದಿಗೆ ಕರ್ನಾಟಕದ ಮೂಲಕ ಭಾರತವನ್ನೂ, ಭಾರತದ ಮೂಲಕ ಕರ್ನಾಟಕವನ್ನೂ ಅಭಿನ್ನಗೊಳಿಸೋಣ, ಬಲಿಷ್ಠಗೊಳಿಸೋಣ. ಭವ್ಯ ಕರ್ನಾಟಕ, ಭವ್ಯ ಭಾರತ ನಿರ್ಮಿಸೋಣ.

**(ವಿ ಸುನಿಲ್ ಕುಮಾರ್)**
ಇಂಧನ, ಕನ್ನಡ ಮತ್ತು ಸಂಸ್ಕೃತಿ
ಇಲಾಖೆ ಸಚಿವರು

# ಪ್ರಧಾನ ಸಂಪಾದಕರ ಮಾತು

ಸ್ವಾತಂತ್ರ್ಯ ಎಂಬುದು ಲೌಕಿಕವಾಗಿಯೂ ಲೋಕೋತ್ತರವಾಗಿಯೂ ಮಹೋನ್ನತವಾದ ಮೌಲ್ಯ. ಭಾರತೀಯ ಸಂಸ್ಕೃತಿಯು ಧರ್ಮ, ಅರ್ಥ, ಕಾಮ, ಮೋಕ್ಷಗಳನ್ನು ಪುರುಷಾರ್ಥವೆಂದು ಕರೆದಿದೆ. ಮೋಕ್ಷವೆಂದರೆ ಬಿಡುಗಡೆ, ಸ್ವಾತಂತ್ರ್ಯ ಎಂದರ್ಥ. ಹುಟ್ಟು ಸಾವುಗಳಿಂದ ಬಿಡುಗಡೆ ಎಂಬುದು ಲೋಕೋತ್ತರವಾದ ಅರ್ಥವಾದರೆ, ಸಾವಿಲ್ಲದ, ನೋವಿಲ್ಲದ ಸ್ಥಿತಿಗಾಗಿ ಕಲ್ಯಾಣ ನಾಡಿನ ನಿರ್ಮಾಣಕ್ಕಾಗಿ ನಾವು ಗಳಿಸುವ ನಮ್ಮ ಸ್ವಯಂ ನಿಯಂತ್ರಣದ ಸ್ವಾತಂತ್ರ್ಯ ಎಂಬುದು ಲೌಕಿಕವಾದ ಅರ್ಥ. ಲೌಕಿಕ ಹಾಗೂ ಅಲೌಕಿಕಗಳು ಪರಸ್ಪರ ವಿರೋಧಿಗಳಲ್ಲ; ಅವು ಪರಸ್ಪರ ಪೂರಕವಾದವು. ಲೋಕವನ್ನು ಲೋಕೋತ್ತರದ ಔನ್ನತ್ಯಕ್ಕೆ ಏರಿಸುವ ದರ್ಶನವೇ ಭಾರತೀಯ ದರ್ಶನ. ಸ್ವಾತಂತ್ರ್ಯ ನಮ್ಮ ಧರ್ಮ, ನಮ್ಮ ಆತ್ಮ, ನಮ್ಮ ಜೀವನದ ಪರಮ ಪುರುಷಾರ್ಥ. ಅದನ್ನು ಬಯಲು ಎಂದೂ ಕರೆದಿದ್ದಾರೆ. ಅಂತಹ ಸ್ವಾತಂತ್ರ್ಯಕ್ಕಾಗಿ ಭಾರತವು ತನ್ನ ಪುರಾತನ ಕಾಲದಿಂದಲೂ ಬದುಕುತ್ತಾ ಬಂದಿದೆ. ಸ್ವಾತಂತ್ರ್ಯಕ್ಕೆ ಚ್ಯುತಿ ಬಂದಾಗಲೆಲ್ಲ ಭಾರತೀಯರು ಭರತಮಾತೆಯ ಪದತಲದಲ್ಲಿ ತಮ್ಮ ತನು–ಮನ–ಧನಗಳನ್ನು ಅರ್ಪಿಸಿದ್ದಾರೆ. ಅದನ್ನು ರಸಋಷಿ ಕುವೆಂಪು ಅವರು "ಇಂದು ರಕ್ತದ ಬಿಂದು ನಾಳೆ ಸೌಖ್ಯದ ಸಿಂಧು" ಎಂದು ಕರೆದಿದ್ದಾರೆ.

ನಮ್ಮ ದೇಶದ ಸ್ವಾತಂತ್ರ್ಯ ಎಂದರೆ ಅದು ತ್ಯಾಗ, ಬಲಿದಾನಗಳ ಫಲ. ಭಾರತದ ಮೇಲೆ ದಾಳಿ ಮಾಡಲು ಬಂದ ಅಲೆಗ್ಸಾಂಡರನಿಂದ ಹಿಡಿದು ಮೊಘಲರಾದಿಯಾಗಿ ಬ್ರಿಟಿಷರವರೆಗಿನ ಎಲ್ಲ ದಾಳಿಕೋರರ ಕ್ರೌರ್ಯವನ್ನು ಮೆಟ್ಟಿ ನಿಂತು ಭಾರತೀಯರು ಭಾರತಾಂಬೆಯ ಆತ್ಮಗೌರವವನ್ನು ಎತ್ತಿಹಿಡಿದಿರುವುದರ ಪ್ರತೀಕ ನಮ್ಮ ಸ್ವಾತಂತ್ರ್ಯ.

ಪ್ರಸ್ತುತ ೧೫.೦೮.೧೯೪೭ ರಂದು ನಾವು ಗಳಿಸಿದ ಸ್ವಾತಂತ್ರ್ಯದ ಅಮೃತಘಳಿಗೆಗೆ ಇದೀಗ ೧೫.೦೮.೨೦೨೧ಕ್ಕೆ ೭೫ನೆಯ ಸ್ವಾತಂತ್ರ್ಯ ಅಮೃತ ಮಹೋತ್ಸವ ಸಂಭ್ರಮ. ೧೫.೦೮.೨೦೨೨ಕ್ಕೆ ೭೫ ವರ್ಷಗಳನ್ನು ಪೂರೈಸಿ ೭೬ನೆಯ ಸ್ವಾತಂತ್ರ್ಯೋತ್ಸವದ ಆತ್ಮನಿರ್ಭರ ಭಾರತದ ನವನಿರ್ಮಾಣದ ಅವಕಾಶಗಳ ಸಂಭ್ರಮ. ಈ ಒಂದು ವರ್ಷ ಕಾಲ ಭಾರತ ಸರ್ಕಾರ, ಕರ್ನಾಟಕ ಸರ್ಕಾರ "ಸ್ವಾತಂತ್ರ್ಯದ ಅಮೃತ ಮಹೋತ್ಸವ"ವನ್ನು ಆಚರಿಸುತ್ತಿದೆ. ಅದರ ಅಂಗವಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಆಗಸ್ಟ್– ೨೦೨೧ರ ತಿಂಗಳು ಪೂರ್ತಿ "ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ" ಎಂಬ ಹೆಸರಿನಲ್ಲಿ ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲಿ ನಡೆದಿರುವ ಸ್ವಾತಂತ್ರ್ಯ ಹೋರಾಟ ಕುರಿತ ಆನ್ಲೈನ್ ಉಪನ್ಯಾಸಗಳನ್ನು ನಡೆಸಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಾನ್ಯ ಸಚಿವರಾದ ಶ್ರೀ ಸುನಿಲ್ ಕುಮಾರ್ ಅವರು ಸ್ವಾತಂತ್ರ್ಯದ ಅಮೃತ ಮಹೋತ್ಸವವನ್ನು ರಾಜ್ಯಾದ್ಯಂತ ಬೃಹತ್ ಸ್ವರೂಪದಲ್ಲಿ ಅರ್ಥಪೂರ್ಣವಾಗಿ ಆಚರಿಸಬೇಕೆಂದು ತೀರ್ಮಾನಿಸಿದ್ದಾರೆ. ಅವರಿಗೆ ರಾಜ್ಯದ ೭೫ ಸ್ಥಳಗಳಲ್ಲಿ ೭೫ ಸ್ವಾತಂತ್ರ್ಯ ಜಾಥಾಗಳು ನಡೆಯಬೇಕು, ಎಲ್ಲ ಜಿಲ್ಲೆಗಳಿಂದ ರಥಯಾತ್ರೆ ಆಗಬೇಕು, ಬೆಂಗಳೂರು ಮಹಾನಗರದಲ್ಲಿ ಮೂರು ದಿನಗಳ ಸಮಾವೇಶ, ಪ್ರದರ್ಶನಿ, ಪುಸ್ತಕ ಮಾರಾಟ ಮೊದಲಾದ ಹತ್ತು ಹಲವು ಚಟುವಟಿಕೆಗಳನ್ನು ನಡೆಸುವ ಮೂಲಕ ಹೊಸ ತಲೆಮಾರಿಗೆ ಸ್ವಾತಂತ್ರ್ಯದ ಅಮೃತವನ್ನುಣಿಸಬೇಕೆಂಬ ಕನಸಿದೆ. ಅದರ ಭಾಗವಾಗಿ ಅವರು ರಾಜ್ಯದ ೭೫ ಸ್ವಾತಂತ್ರ್ಯ ಹೋರಾಟದ ಸ್ಥಳಗಳನ್ನು ಗುರುತಿಸಿ ೭೫ ಕಿರುಹೊತ್ತಿಗೆಗಳನ್ನು ಬರೆಸಿ ಪ್ರಕಟಿಸುವ ಜವಾಬ್ದಾರಿಯನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿಗೆ ವಹಿಸಿದ್ದಾರೆ. ನಮಗೆ ಜವಾಬ್ದಾರಿ ವಹಿಸಿದ್ದು ದಿನಾಂಕ: ೩೦.೧೧.೨೦೨೧ರಂದು ಮಾನ್ಯ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ. ಅಂದಿನಿಂದಲೇ ಕಾರ್ಯಪ್ರವೃತ್ತರಾದ ನಾವು ರಾಜ್ಯದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಎಲ್ಲ ಜಿಲ್ಲಾ ಸಹಾಯಕ ನಿರ್ದೇಶಕರಿಂದ ಸ್ಥಳಗಳ ಮಾಹಿತಿ ಪಡೆದೆವು. ಜೊತೆಗೆ ರಾಜ್ಯದ ಐದು ಜನರನ್ನು ಸಂಪಾದಕರನ್ನಾಗಿ ನಿಯೋಜಿಸಿ ದಿನಾಂಕ: ೦೩.೧೨.೨೦೨೧ರಂದು ಅಕಾಡೆಮಿಯಲ್ಲಿ ಸಂಪಾದಕರ ಸಭೆ ನಡೆಸಿದೆವು. ಸಂಪಾದಕರಾಗಿ ಡಾ. ಮೃತ್ಯುಂಜಯ ರುಮಾಲೆ, ಹೊಸಪೇಟೆ, ಡಾ. ಎಸ್. ಜಿ. ರಾಮದಾಸ ರೆಡ್ಡಿ, ಮೈಸೂರು, ಡಾ. ಪ್ರಕಾಶ ಗ. ಖಾಡೆ, ಬಾಗಲಕೋಟೆ, ಶ್ರೀ ನರೇಂದ್ರಕುಮಾರ್ ಎಸ್.ಎಸ್., ಬೆಂಗಳೂರು ಹಾಗೂ ಶ್ರೀಮತಿ ರಾಜಲಕ್ಷ್ಮಿ ಕೋಡಿಬೆಟ್ಟು, ಮಂಗಳೂರು ಇವರೊಂದಿಗೆ ಎಲ್ಲ ಸ್ಥಳಗಳ ಬಗ್ಗೆ ಚರ್ಚಿಸಿ ೭೫ ಸ್ಥಳಗಳನ್ನು ಆಯ್ಕೆ ಮಾಡಿದೆವು. ಒಬ್ಬೊಬ್ಬ ಸಂಪಾದಕರಿಗೆ ೧೫ ಸ್ಥಳಗಳನ್ನು ಹಂಚಿ, ೧೫ ಲೇಖಕರಿಂದ ೧೫ ಕಿರುಪುಸ್ತಕಗಳನ್ನು ಬರೆಯಿಸಿಕೊಡುವ ಜವಾಬ್ದಾರಿ ನೀಡಿದೆವು. ಎರಡು ತಿಂಗಳ ಅವಧಿಯಲ್ಲಿ ಈ ೭೫ ಪುಸ್ತಕಗಳು ಪ್ರಕಟವಾಗುತ್ತಿವೆ. ಈ ಕೃತಿಗಳು ಇತಿಹಾಸದ ಶಾಸ್ತ್ರೀಯ ಮಾದರಿ, ವರದಿಯ ಕಥನ ಮಾದರಿ ಹಾಗೂ ಸೃಜನಶೀಲ ಅಭಿವ್ಯಕ್ತಿಯ ಸಾಹಿತ್ಯ ಮಾದರಿಗಳಿಂದ ಕೂಡಿರುವುದು ಗಮನಾರ್ಹ. ಅತೀ ಕಡಿಮೆ ಅವಧಿಯಲ್ಲಿ ಕ್ಷೇತ್ರಕಾರ್ಯ ಮತ್ತು ಅಧ್ಯಯನ ಮಾಡಿ ಮೌಲಿಕವಾದ ಕೃತಿಗಳನ್ನು ಬರೆದುಕೊಟ್ಟಿರುವ ಎಲ್ಲಾ ಲೇಖಕರ, ಸಂಪಾದಕರ ಶ್ರಮ ಸಾರ್ಥಕತೆ ಪಡೆದಿದೆ. ಈ ನಿಟ್ಟಿನ ಅಧ್ಯಯನಗಳಿಗೆ ಈ ಕೃತಿಗಳು ಪ್ರೇರೇಪಿಸುತ್ತವೆ. ಇದೊಂದು ತುರ್ತಾದ ಆಂದೋಲನಾತ್ಮಕವಾದ ಪ್ರಯತ್ನ. ಇದಕ್ಕೆ ಸಂಪೂರ್ಣ ಸಹಕಾರ ನೀಡಿದ ಮಾನ್ಯ ಸಚಿವರಾದ ಶ್ರೀ ವಿ ಸುನಿಲ್ ಕುಮಾರ್ ಅವರಿಗೆ, ಎಲ್ಲಾ ಸಂಪಾದಕರಿಗೆ, ಎಲ್ಲಾ ಲೇಖಕರಿಗೆ, ಇಲಾಖೆಯ ಕಾರ್ಯದರ್ಶಿಗಳಾದ ಡಾ. ಎನ್. ಮಂಜುಳಾ ಅವರಿಗೆ, ನಿರ್ದೇಶಕರಾದ ಶ್ರೀ ಎಸ್. ರಂಗಪ್ಪ ಅವರಿಗೆ, ಜಂಟಿ ನಿರ್ದೇಶಕರಾದ ಶ್ರೀ ಅಶೋಕ್ ಎನ್. ಚಲವಾದಿ ಅವರಿಗೆ ಹಾಗೂ ಎಲ್ಲಾ ಅಧಿಕಾರಿ ವರ್ಗಕ್ಕೆ ಸಾಹಿತ್ಯ ಅಕಾಡೆಮಿಯ ಸರ್ವ ಸದಸ್ಯರಿಗೆ ಪ್ರೀತಿಯಿಂದ ವಂದಿಸುತ್ತೇನೆ. ಯೋಜನೆ ಪೂರ್ಣಗೊಳ್ಳಲು ವಿಶೇಷವಾಗಿ ನೆರವಾದ ಮಿತ್ರರಾದ ಶ್ರೀ ಮಾಲತೀಶ್ ಭಟ್, ಶ್ರೀ ಹರ್ಷ ನಾರಾಯಣ, ಶ್ರೀಮತಿ ನಯನಾ ಎಸ್. ಅವರನ್ನು ನೆನೆಯುತ್ತಾ ವಂದಿಸುತ್ತೇನೆ. ಕಡಿಮೆ ಅವಧಿಯಲ್ಲಿ ಹಗಲಿರುಳು ಶ್ರಮಿಸಿದ ದಣಿವರಿಯದ ದುಡಿಮೆಗಾರರಾದ ರಿಜಿಸ್ಟ್ರಾರ್ ಎನ್. ಕರಿಯಪ್ಪ, ನಮ್ಮ ಬಳಗ ವಿ. ಹರೀಶ್‌ಕುಮಾರ್, ಹರೀಶ್, ಸೈಯದ್ ಜಾವೀದ್, ಸುಚಿತ್ರ ಎಸ್. ಜಿ., ಗೋಪಾಲ ಎನ್., ಸುನೀಲ್ ಅವರಿಗೆ ಹಾಗೂ ಸುಂದರವಾಗಿ ಮುದ್ರಿಸಿದ ರಶ್ಮಿ ಪ್ರಿಂಟರ್ಸ್ ಬಳಗಕ್ಕೆ, ಮುಖಪುಟ ರಚಿಸಿಕೊಟ್ಟ ಶ್ರೀ ಮುರಳೀಧರ ವಿ. ರಾಥೋಡ್ ಅವರಿಗೆ ವಂದಿಸುತ್ತೇನೆ.



**ಬಿ. ವಿ. ವಸಂತಕುಮಾರ್**

ಅಧ್ಯಕ್ಷರು

# ಲೇಖಕರ ಮಾತು

ಮಾನವನ ಬದುಕಿಗೆ ಗಾಳಿ, ನೀರು ಮತ್ತು ಆಹಾರಗಳಷ್ಟೇ ಸ್ವಾತಂತ್ರ್ಯ ಕೂಡ ಅತ್ಯಂತ ಅವಶ್ಯಕ ಮತ್ತು ಅನಿವಾರ್ಯ.ತನ್ನ ಸ್ವಾತಂತ್ರ್ಯಕ್ಕೆ ಧಕ್ಕೆಯೊದಗಿದಾಗ ಅವನು ಸ್ವಾಭಾವಿಕವಾಗಿಯೇ ವಿರೋಧಿಸುತ್ತಾನೆ. ಪ್ರತಿಭಟಿಸುತ್ತಾನೆ, ಸಿಡಿದೇಳುತ್ತಾನೆ, ಅನಿವಾರ್ಯವಾದರೆ ಪ್ರಾಣದ ಹಂಗು ತೊರೆದು ತನ್ನ ಸ್ವಾತಂತ್ರ್ಯ ಕಸಿದುಕೊಂಡವರ ವಿರುದ್ಧ ಹೋರಾಟಕ್ಕೂ ಇಳಿಯುತ್ತಾನೆ. ಭಾರತೀಯರ ಸ್ವಾತಂತ್ರ್ಯ ಚಳುವಳಿಯ ವಿಷಯಕ್ಕೆ ಬಂದಾಗ ಇದು ಅಕ್ಷರಶಃ ಸತ್ಯವೆನಿಸುತ್ತದೆ.

ಕೇವಲ ವ್ಯಾಪರಕ್ಕಾಗಿ ಇಲ್ಲಿಗೆ ಬಂದ ಇಂಗ್ಲೀಷರು ಪರಿಸ್ಥಿತಿಯ ದುರ್ಲಾಭ ಪಡೆದು ಇಡೀ ಭಾರತವನ್ನು ವಶಪಡಿಸಿಕೊಂಡುದೇ ಅಲ್ಲದೆ ಭಾರತೀಯರನ್ನು ತಮ್ಮ ಗುಲಾಮರಂತೆ ಭಾವಿಸಿ ಶೋಷಿಸತೊಡಗಿದಾಗ ಜಾಗೃತಗೊಂಡ ಭಾರತೀಯರು ಅವರ ವಿರುದ್ಧಹೋರಾಡಿ ೧೯೪೭ ರಲ್ಲಿ ಅವರನ್ನು ದೇಶದಿಂದ ಓಡಿಸಿ ಸ್ವಾತಂತ್ರ್ಯ ಪಡೆದುಕೊಂಡುದು ಈಗ ಇತಿಹಾಸ. ಹೀಗೆ ತಮ್ಮ ತ್ಯಾಗ, ಬಲಿದಾನಗಳ ಮೂಲಕ ಭಾರತೀಯರು ಪಡೆದುಕೊಂಡ ಸ್ವಾತಂತ್ರ್ಯಕ್ಕೆ ೭೫ ವರ್ಷಗಳು ತುಂಬುತ್ತಿವೆ. ಸ್ವಾತಂತ್ರ್ಯದ ಅಮೃತೋತ್ಸವದ ಈ ಸಂದರ್ಭದಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ರಾಜ್ಯದ ೭೫ ಸ್ಥಳಗಳಲ್ಲಿ ನಡೆದ ಸ್ವಾತಂತ್ರ್ಯ ಹೋರಾಟದ ವಿವರಗಳನ್ನು ಒಳಗೊಂಡ ಕಿರುಪುಸ್ತಕಗಳನ್ನು ಹೊರತರುವ ಮೂಲಕ ಅಲ್ಲಿ ನಡೆದ ಹೋರಾಟದ ವಿಧಾನ, ಆ ಹೋರಾಟದಲ್ಲಿ ಭಾಗವಹಿಸಿ, ಜೀವದ ಹಂಗು ತೊರೆದು  ಹೋರಾಡಿ ದೇಶಕ್ಕೆ ಸ್ವಾತಂತ್ರ್ಯ ದೊರಕಿಸಿಕೊಟ್ಟ ಹೋರಾಟಗಾರರ ತ್ಯಾಗ ಮತ್ತು ಬಲಿದಾನಗಳ ಅರಿವು ಮೂಡಿಸುವ ಶ್ರೇಷ್ಠಕಾರ್ಯ ಮಾಡುತ್ತಿದೆ. ಈ ಕಾರ್ಯದಲ್ಲಿ ತುಮಕೂರು ಜಿಲ್ಲೆಯ, ಶಿರಾ ತಾಲ್ಲೂಕಿನ ತಾವರೆಕೆರೆಯಲ್ಲಿ ನಡೆದ ಸ್ವಾತಂತ್ರ್ಯ ಹೋರಾಟದ ಮಾಹಿತಿಯನ್ನು ಕುರಿತು ಕೃತಿ ರಚಿಸಲು ಅವಕಾಶ ನೀಡಿ, ರಾಷ್ಟ್ರದ ಸ್ವಾತಂತ್ರ್ಯದ ಅಮೃತೋತ್ಸವಕ್ಕೆ

ಅಳಿಲು ಸೇವೆ ಸಲ್ಲಿಸುವ ಭಾಗ್ಯವನ್ನು ನನಗೂ ಕಲ್ಪಿಸಿಕೊಟ್ಟದ್ದಕ್ಕಾಗಿ ಕರ್ನಾಟಕ ಸರ್ಕಾರ ಹಾಗೂ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಮಾನ್ಯ ಅಧ್ಯಕ್ಷರಾದ ಡಾ. ಬಿ. ವಿ. ವಸಂತಕುಮಾರ್, ರಿಜಿಸ್ಟ್ರಾರ್ ರವರಾದ ಶ್ರೀ ಎನ್. ಕರಿಯಪ್ಪ ಹಾಗೂ ಬರೆಯಲು ತಿಳಿಸಿದ, ಸಂಪಾದಕರಾದ ಡಾ. ಮೃತ್ಯುಂಜಯ ರುಮಾಲೆ, ಸಂಪಾದಕರಲ್ಲೊಬ್ಬರಾದ, ಡಾ. ಎಸ್. ಜಿ. ರಾಮದಾಸರೆಡ್ಡಿಯವರಿಗೆ ನನ್ನ ಹೃತ್ಪೂರ್ವಕ ಧನ್ಯವಾದಗಳು.

**ಪ್ರೊ ಕೆ. ಪುಟ್ಟರಂಗಪ್ಪ**

ತುರುವೇಕೆರೆ
೫೭೨ ೨೨೭

## ಪರಿವಿಡಿ


| | |
|---|---|
| ಶುಭ ಸಂದೇಶ | ೩ |
| ಶುಭ ಸಂದೇಶ | ೫ |
| ಪ್ರಧಾನ ಸಂಪಾದಕರ ಮಾತು | ೭ |
| ಲೇಖಕರ ಮಾತು | ೧೧ |
| ಶಿರಾ ತಾಲ್ಲೂಕು ತುಮಕೂರು ಜಿಲ್ಲೆ | ೧೫ |
| ಆರಂಭದ ಚಳುವಳಿಗಳು | ೨೨ |
| ತಾವರೆಕೆರೆಯಲ್ಲಿ ನಡೆದ ಚಿರಸ್ಮರಣೀಯ ಅರಣ್ಯ ಸತ್ಯಾಗ್ರಹ | ೨೮ |
| ತಾವರೆಕೆರೆ ಅರಣ್ಯ ಸತ್ಯಾಗ್ರಹದಲ್ಲಿ ಭಾಗವಹಿಸಿದ ಪ್ರಮುಖ ಹೋರಾಟಗಾರರ ವ್ಯಕ್ತಿ ಚಿತ್ರಣ | ೩೯ |
| ● ಅನುಬಂಧ | |
| ಛಾಯಾಚಿತ್ರಗಳು | ೫೦ |
| ಅಮೃತ ಮಹೋತ್ಸವ ಪ್ರಕಟಣೆ – ೭೫ ಕಿರುಪುಸ್ತಕಗಳ ಪಟ್ಟಿ | ೫೩ |

# ಶಿರಾ ತಾಲ್ಲೂಕು ತುಮಕೂರು ಜಿಲ್ಲೆ

ಕರ್ನಾಟಕ ರಾಜ್ಯದ ಬಯಲು ಸೀಮೆಯ ಜಿಲ್ಲೆಗಳಲ್ಲೊಂದಾದ ತುಮಕೂರು ಜಿಲ್ಲೆ ವಿಸ್ತಾರದ ದೃಷ್ಟಿಯಿಂದ ರಾಜ್ಯದ ಮೂರನೇ ಅತಿ ದೊಡ್ಡ ಜಿಲ್ಲೆ. ಉತ್ತರದಲ್ಲಿ ಆಂಧ್ರಪ್ರದೇಶದ ಅನಂತಪುರ, ದಕ್ಷಿಣದಲ್ಲಿ ಮಂಡ್ಯ ಮತ್ತು ಹಾಸನ, ಪೂರ್ವಕ್ಕೆ ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಂತರ ಮತ್ತು ರಾಮನಗರ ಜಿಲ್ಲೆಗಳು ಹಾಗೂ ಪಶ್ಚಿಮಕ್ಕೆ ಹಾಸನ, ಚಿಕ್ಕಮಗಳೂರು ಮತ್ತು ಚಿತ್ರದುರ್ಗ ಜಿಲ್ಲೆಗಳಿಂದ ಸುತ್ತುವರೆಯಲ್ಪಟ್ಟಿರುವ ಈ ಜಿಲ್ಲೆಯ ಹತ್ತು ತಾಲ್ಲೂಕುಗಳಲ್ಲೊಂದಾದ ಪಾವಗಡವು ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯಿಂದ ಸುತ್ತುವರೆಯಲ್ಪಟ್ಟಿದ್ದು ಯಾವ ಕಡೆಯಿಂದಲೂ ಈ ಜಿಲ್ಲೆಯ ಭೂ ಸಂಪರ್ಕ ಹೊಂದಿಲ್ಲದಿರುವುದು ವಿಶೇಷವಾಗಿದೆ. ೧೦೫೯೭ ಚ.ಕಿ.ಮೀ. ವಿಸ್ತೀರ್ಣ ಹೊಂದಿರುವ ಈ ಜಿಲ್ಲೆ ಪೂರ್ವ–ಪಶ್ಚಿಮವಾಗಿ ೧೦೭.೮೨ ಕಿ.ಮೀ ಹಾಗೂ ಉತ್ತರ–ದಕ್ಷಿಣವಾಗಿ ೧೬೪.೧೫ ಕಿ.ಮೀ ವಿಸ್ತರಿಸಿದ್ದು ಸಮುದ್ರ ಮಟ್ಟದಿಂದ ೨೪೫೦ ಅಡಿಎತ್ತರದಲ್ಲಿದೆ. ಸುಮಾರು ೨೭೧೫ ಗ್ರಾಮಗಳನ್ನು ಹೊಂದಿರುವ ಈ ಜಿಲ್ಲೆಯ ಜನಸಂಖ್ಯೆ ೨೦೧೧ರ ಜನಗಣತಿಯ ಪ್ರಕಾರ ೨೬,೭೮,೯೮೦ ಆಗಿದೆ. ಆಡಳಿತದ ಅನುಕೂಲಕ್ಕಾಗಿ ಈ ಜಿಲ್ಲೆ ತುಮಕೂರು, ಕೊರಟಗೆರೆ, ಮಧುಗಿರಿ, ಶಿರಾ, ಮತ್ತು ಪಾವಗಡ, ಗುಬ್ಬಿ, ಕುಣಿಗಲ್, ಚಿಕ್ಕನಾಯಕನಹಳ್ಳಿ, ತಿಪಟೂರು, ತುರುವೇಕೆರೆಗಳೆಂಬ ಹತ್ತು ತಾಲ್ಲೂಕುಗಳನ್ನು ಹೊಂದಿದ್ದು, ಜಿಲ್ಲೆಯಲ್ಲಿ ಹನ್ನೊಂದು ವಿಧಾನಸಭಾ ಕ್ಷೇತ್ರಗಳಿವೆ. ಕೃಷಿ ಪ್ರಧಾನ ಜಿಲ್ಲೆಯಾದ ತುಮಕೂರು ಜಿಲ್ಲೆಯಲ್ಲಿ ತೆಂಗು ಪ್ರಮುಖ ಬೆಳೆಯಾಗಿದ್ದು ೧,೮೨,೦೦೦ ಹೆಕ್ಟೇರ್ ಪ್ರದೇಶದಲ್ಲಿ ತೆಂಗು ಬೆಳೆ ಹೊಂದಿರುವ ಈ ಜಿಲ್ಲೆ ರಾಜ್ಯದ ಒಟ್ಟು ತೆಂಗು ಬೆಳೆಯಲ್ಲಿ ೩೪% ಬೆಳೆಯನ್ನು ತಾನೇ ಬೆಳೆಯುತ್ತಿದ್ದು. ಇಡೀ ರಾಜ್ಯದಲ್ಲಿ ಅಷ್ಟೇಕೆ ದೇಶದಲ್ಲೇ ಪ್ರಥಮ ಸ್ಥಾನ ಪಡೆಯುವ ಮೂಲಕ 'ಕಲ್ಪತರು ನಾಡು' ಎಂದೇ ಪ್ರಸಿದ್ಧವಾಗಿದೆ. ಅಲ್ಲದೆ ಈ ಜಿಲ್ಲೆಯ ಪ್ರಮುಖ ನಗರ ತಿಪಟೂರಿನಲ್ಲಿ ಇಡೀ ಏಷ್ಯಾ ಖಂಡದಲ್ಲಿಯೇ ದೊಡ್ಡದಾದ ಕೊಬ್ಬರಿ ಮಾರುಕಟ್ಟೆ ಇದೆ.

ಅದುದರಿಂದಲೇ ಸರ್ಕಾರ ಒಂದು ಜಿಲ್ಲೆ ಒಂದು ಉತ್ಪನ್ನ ಯೋಜನೆಯಡಿ ತುಮಕೂರು ಜಿಲ್ಲೆಗೆ ತೆಂಗನ್ನು ಪ್ರಮುಖ ಬೆಳೆ ಎಂದು ಘೋಷಿಸಿದೆ.

ತುಮಕೂರು ಜಿಲ್ಲೆಯ ಹತ್ತು ತಾಲ್ಲೂಕುಗಳಲ್ಲಿ ಒಂದಾದ ಶಿರಾ ಕರ್ನಾಟಕ ರಾಜ್ಯದ ರಾಜಕೀಯ, ಧಾರ್ಮಿಕ, ಐತಿಹಾಸಿಕ ಮತ್ತು ಸಾಂಸ್ಕೃತಿಕ ಕ್ಷೇತ್ರದ ಇತಿಹಾಸದಲ್ಲಿ ತನ್ನದೇ ಆದ ವಿಶಿಷ್ಟವಾದ ಸ್ಥಾನವನ್ನು ಪಡೆದಿದೆ. ತಾಲ್ಲೂಕು ಕೇಂದ್ರವಾದ ಶಿರಾ ಪಟ್ಟಣವು ರಾಜಧಾನಿ ಬೆಂಗಳೂರಿನಿಂದ ೧೨೦ ಕಿ.ಮೀ ಹಾಗೂ ಜಿಲ್ಲಾ ಕೇಂದ್ರವಾದ ತುಮಕೂರಿನಿಂದ ೫೨ ಕಿ.ಮೀ ದೂರದಲ್ಲಿದೆ. ತುಮಕೂರು ಜಿಲ್ಲೆಯಲ್ಲಿ ಶಿರಾ ತಾಲ್ಲೂಕು ಒಂದು ಅತಿ ಪ್ರಮುಖವಾದ ಹಾಗೂ ವಿಶಾಲವಾದ ತಾಲ್ಲೂಕಾಗಿದೆ. ಕೇವಲ ವಿಸ್ತೀರ್ಣದಲ್ಲಷ್ಟೇ ಅಲ್ಲ ಸಾಂಸ್ಕೃತಿಕ ಪರಂಪರೆಯಲ್ಲೂ ದೊಡ್ಡದು. ಈ ತಾಲ್ಲೂಕು ತನ್ನದೇ ಆದ ಕೊಡುಗೆಗಳಿಂದ ಕರ್ನಾಟಕದ ಸಾಂಸ್ಕೃತಿಕ ಪರಂಪರೆಯನ್ನು ಶ್ರೀಮಂತಗೊಳಿಸಿದೆ. ಇಲ್ಲಿರುವ ನೆಲಕೋಟೆ ರಾಜ್ಯದಲ್ಲಿಯೇ ವಿಶಿಷ್ಟವಾದುದು. ಸುಂದರವಾದ ಭಿತ್ತಿಚಿತ್ರಗಳಿರುವ ಶಿರಾದ ರೇವಣಸಿದ್ದೇಶ್ವರ ಹಾಗೂ ಸೀಬಿಯ ನರಸಿಂಹಸ್ವಾಮಿ ದೇಗುಲಗಳು ಆಕರ್ಷಣೆಯ ಕೇಂದ್ರಗಳಾಗಿವೆ. ನಿಸರ್ಗ ಸುಂದರವಾದ ವಿಶ್ರಾಂತಿಧಾಮವೆನಿಸಿದ ಮರಡಿಗುಡ್ಡ, ರಾಜ್ಯದಲ್ಲಿಯೇ ಪ್ರಖ್ಯಾತವಾದ ಪಟ್ಟನಾಯಕನಹಳ್ಳಿಯ ಗುರುಗುಂಡ ಬ್ರಹ್ಮೇಶ್ವರಮಠಗಳು ಈ ತಾಲ್ಲೂಕಿನಲ್ಲಿಯೇ ಇವೆ. ತಾಲ್ಲೂಕಿನಾದ್ಯಂತ ಜಾನಪದ ಕಲಾವಿದರು ತುಂಬಿದ್ದು, ಜಾನಪದ ಕಣಜವಾಗಿರುವ ಈ ತಾಲ್ಲೂಕು ಅನೇಕ ಸಂಸ್ಕೃತಿಗಳ ನೆಲೆಬೀಡಾಗಿದೆ.

ಈ ತಾಲ್ಲೂಕಿನ ಪೂರ್ವಕ್ಕೆ ಮಧುಗಿರಿ ಮತ್ತು ಕೊರಟಗೆರೆ ತಾಲ್ಲೂಕುಗಳು, ಈಶಾನ್ಯ ಮತ್ತು ಪೂರ್ವಕ್ಕೆ ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯ ಮಡಕಶಿರ ತಾಲ್ಲೂಕು ಆಗ್ನೇಯಕ್ಕೆ ತುಮಕೂರು ತಾಲ್ಲೂಕು, ದಕ್ಷಿಣಕ್ಕೆ ಗುಬ್ಬಿ, ನೈರುತ್ಯಕ್ಕೆ ಚಿಕ್ಕನಾಯಕನಹಳ್ಳಿ ತಾಲ್ಲೂಕುಗಳು ಇವೆ. ಈ ತಾಲ್ಲೂಕು ೧೩೦–೪೧' ಉತ್ತರ ಅಕ್ಷಾಂಶ ಹಾಗೂ ೭೬೦–೫೪' ಪೂರ್ವ ರೇಖಾಂಶಗಳ ನಡುವೆ ವಿಸ್ತರಿಸಿದ್ದು ತಾಲ್ಲೂಕಿನ ಒಟ್ಟು ವಿಸ್ತೀರ್ಣ ೧೫೩೪.೦೧ ಚ.ಕಿ.ಮೀ. ಇದೆ. ಸಮುದ್ರ ಮಟ್ಟದಿಂದ ೬೫೮.೩ ಮೀಟರ್ ಎತ್ತರದಲ್ಲಿದ್ದು. ೨೪೯ ಗ್ರಾಮಗಳನ್ನು ಹೊಂದಿರುವ ಈ ತಾಲ್ಲೂಕಿನ ಜನಸಂಖ್ಯೆ ೨೦೧೧ರ ಜನಗಣತಿಯ ಪ್ರಕಾರ ಎರಡು ಲಕ್ಷದ ಐವತ್ತಾರು ಸಾವಿರದ ಎರಡು ನೂರ ನಾಲ್ಕು ಇದೆ.



## ವಾಯುಗುಣ

ಶಿರಾ ತಾಲ್ಲೂಕು ಬಹುಮಟ್ಟಿಗೆ ಚಿತ್ರದುರ್ಗ ಜಿಲ್ಲೆಯ ವಾಯುಗುಣಕ್ಕೆ ಹೋಲಿಕೆಯಾಗುತ್ತದೆ. ಅಂದರೆ ಇಲ್ಲಿ ತುಂಬ ಬಿಸಿಲು ಮತ್ತು ಸೆಕೆಯಿಂದ ಕೂಡಿದ ವಾಯುಗುಣವಿದ್ದು, ಈ ತಾಲ್ಲೂಕು ಉಷ್ಣವಲಯದಲ್ಲಿದ್ದರೂ ದಕ್ಷಿಣದ ಸುಡುಬಿಸಿಲಾಗಲಿ, ಉತ್ತರದ ಉರಿಗಾಳಿಯಾಗಲಿ ಇಲ್ಲಿ ಇಲ್ಲ. ಇಲ್ಲಿನ ವಾತಾವರಣವು ಒಂದು ಬಗೆಯ ಸುಖೋಷ್ಣವಾಗಿದೆ. ಮಾರ್ಚಿಯಿಂದ ಮೇ ತಿಂಗಳವರೆಗೂ ಇಲ್ಲಿನ ವಾತಾವರಣದಲ್ಲಿ ಉಷ್ಣತೆ ಒಂದೇ ಸಮನೆ ಏರುತ್ತಲೇ ಇರುತ್ತದೆ.ಏಪ್ರಿಲ್ ಅತಿಹೆಚ್ಚಿನ ಉಷ್ಣತೆಯಿಂದ ಕೂಡಿದ ತಿಂಗಳು. ಈ ಮಾಹೆಯಲ್ಲಿ ಒಮ್ಮೊಮ್ಮೆ ಪರಮಾವಧಿ ಉಷ್ಣತೆಯು ೪೦ ಅಥವಾ ೪೧ಡಿಗ್ರಿ ಸೆಂಟಿಗ್ರೇಡ್ (೧೦೪ ಅಥವಾ ೧೦೬ ಡಿಗ್ರಿ ಫ್ಯಾರನ್ ಹೀಟ್) ಇರುತ್ತದೆ. ತಾಲ್ಲೂಕಿನ ಶಿರಾ, ಚಿಕ್ಕನಹಳ್ಳಿ, ಕಳ್ಳಂಬೆಳ್ಳ, ಬುಕ್ಕಾಪಟ್ಟಣ, ತಾವರೆಕೆರೆ, ಹುಣಸೆಹಳ್ಳಿ, ಬರಗೂರುಗಳಲ್ಲಿ ಒಟ್ಟು ಏಳು ವೃಷ್ಟಿಮಾಪಕ ಕೇಂದ್ರಗಳಿದ್ದು, ೪೫೨ ಮಿ.ಮೀ. ವಾಡಿಕೆ ಮಳೆ ಬಿದ್ದರೆ, ವಾರ್ಷಿಕ ಸರಾಸರಿ ೪೬೬.೧ ಮಿ.ಮೀ. ಮಳೆ ಬೀಳುತ್ತಿದ್ದು ಜಿಲ್ಲೆಯಲ್ಲಿ ಪಾವಗಡ (೨೬೦.೮ ಮಿ.ಮೀ)ವನ್ನು ಬಿಟ್ಟರೆ ಇದು ಅತಿ ಕಡಿಮೆ ಮಳೆ ಬೀಳುವ ತಾಲ್ಲೂಕಾಗಿದೆ.

## ಪ್ರಕೃತಿ ಸಂಪತ್ತು

ಶಿರಾ ತಾಲ್ಲೂಕು ಕರ್ನಾಟಕ ರಾಜ್ಯದ ಬಯಲು ಸೀಮೆಯ ಪ್ರದೇಶ, ಈ ತಾಲ್ಲೂಕಿನ ಪೂರ್ವ ಹಾಗೂ ಪಶ್ಚಿಮ ಭಾಗದಲ್ಲಿ ಅನೇಕಬೆಟ್ಟ ಗುಡ್ಡಗಳು ಮೈದಳೆದಿವೆ ಉತ್ತರಕ್ಕೆ ವಿಶಾಲವಾದ ಬಯಲುಪ್ರದೇಶವೂ, ದಕ್ಷಿಣಕ್ಕೆ ಕೃಷಿ ಹಾಗೂ ತೋಟದ ಬೆಳೆಗಳ ಪ್ರದೇಶಗಳಿವೆ. ಸಿರಾ ಪ್ರದೇಶವು ಸಮುದ್ರಮಟ್ಟದಿಂದ ಜಿಲ್ಲೆಯಲ್ಲಿ (ಪಾವಗಡ ೨೦೮೨ ಅಡಿ ಬಿಟ್ಟರೆ) ೨೧೬೦ ಅಡಿ ಕಡಿಮೆ ಎತ್ತರವನ್ನು ಹೊಂದಿದ್ದು ಜಿಲ್ಲೆಯ ಯಾವ ಭಾಗದಿಂದ ಬೇಕಾದರೂ ಈ ತಾಲ್ಲೂಕಿಗೆ ನೀರನ್ನು ಹರಿಸಬಹುದಾಗಿದೆ.ಲೋಹಮಿಶ್ರಿತ ಕರಿಯ ಗುಂಡುಕಲ್ಲುಗಳಿಂದ ಕೂಡಿದ ಬೆಟ್ಟದ ಶ್ರೇಣಿ ಜಿಲ್ಲೆಯ ಪಶ್ಚಿಮದ ಗಡಿಯ ಉದ್ದಕ್ಕೂ ವ್ಯಾಪಿಸಿದೆ. ಈ ಶ್ರೇಣಿಯು ಚಿಕ್ಕನಾಯಕನಹಳ್ಳಿ, ಗುಬ್ಬಿ ತಾಲ್ಲೂಕುಗಳನ್ನು ಒಳಗೊಂಡು ಸಿರಾ ತಾಲ್ಲೂಕಿನ ಗಡಿಯಲ್ಲಿ ಹಾದುಹೋಗಿದೆ.

## ಜಲ ಸಂಪತ್ತು

ಸಮಸ್ತ ಜೀವಕೋಟಿಗೆ ನೀರೇ ಆಧಾರ. ಜಲವಿಲ್ಲದೆ ಜೀವವಿಲ್ಲ. ಸಸ್ಯಕುಲ ಮಾನವಕುಲ ಹಾಗೂ ಪ್ರಾಣಿಗಳ ದೈನಂದಿನ ಚಟುವಟಿಕೆಗಳಿಗೆ ನೀರು ಅತ್ಯವಶ್ಯಕ.ಶಿರಾ ತಾಲ್ಲೂಕಿನಲ್ಲಿ ಯಾವುದೇ ದೊಡ್ಡ ಜೀವನದಿಗಳಿಲ್ಲ. ಕೆಲವಾರು ಸಣ್ಣ ನದಿಗಳೂ, ಅನೇಕ ದೊಡ್ಡ ಹಳ್ಳಗಳೂ ಇದ್ದು. ಬೆಟ್ಟಗುಡ್ಡಗಳಲ್ಲಿ ಹುಟ್ಟಿ ಹರಿಯುವ ಇವು ತಾಲ್ಲೂಕಿನ ಅನೇಕ ಕೆರೆಕಟ್ಟೆಗಳಿಗೆ ನೀರನ್ನು ಒದಗಿಸುತ್ತವೆ. ಈ ನದಿ, ಹಳ್ಳಗಳು ಬೇಸಿಗೆ ಕಾಲದಲ್ಲಿ ಬತ್ತಿರುತ್ತವೆ. ಮಳೆಗಾಲದಲ್ಲಿ ಮಾತ್ರ ನೀರುಣಿಸುತ್ತವೆ. ಇವುಗಳಲ್ಲಿ ಸುವರ್ಣಮುಖಿ ಈ ತಾಲ್ಲೂಕಿನ ಮುಖ್ಯ ನದಿಯಾಗಿದೆ. ಈ ನದಿಯಿಂದ ಈ ತಾಲ್ಲೂಕಿನ ವ್ಯವಸಾಯಕ್ಕೆ ಸ್ವಲ್ಪ ಮಟ್ಟಿನ ಅನುಕೂಲವಾಗಿದೆ. ಈ ನದಿಗೆ ಅಡ್ಡಲಾಗಿ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಬೋರನಕಣಿವೆಯಲ್ಲಿ ಹಣೆಕಟ್ಟೊಂದನ್ನು ನಿರ್ಮಿಸಲಾಗಿದೆ. ಮೆಕಂಜಿಯವರ ಮೈಸೂರು ಭೂವೈಜ್ಞಾನಿಕ ಹಾಗೂ ಅಂಕಿ ಅಂಶಗಳ ಪರಿಶೀಲನಾ ಸಮೀಕ್ಷೆ ವರದಿಯಂತೆ ೧೭೯೯–೧೮೦೬ ರಲ್ಲಿ ಈ ತಾಲ್ಲೂಕಿನಲ್ಲಿ ೩೬ ದೊಡ್ಡ ಕೆರೆಗಳು, ೧೭೨ ಚಿಕ್ಕ ಹಾಗೂ ಹಾಳಾದ ಕೆರೆಗಳಿದ್ದವೆಂದು ತಿಳಿದು ಬರುತ್ತದೆ. ಇಂದು ಶಿರಾ ತಾಲ್ಲೂಕಿನಲ್ಲಿ ೯೫ ಕೆರೆಗಳಿದ್ದು, ಶಿರಾ ಜಿಲ್ಲೆಯಲ್ಲಿಯೇ ಅತಿ ಹೆಚ್ಚು ಕೆರೆಗಳನ್ನು ಹೊಂದಿದ ತಾಲ್ಲೂಕು ಎಂಬ ಖ್ಯಾತಿಗೆ ಪಾತ್ರವಾಗಿದೆ. ತಾಲ್ಲೂಕಿನ ಕಳ್ಳಂಬೆಳ್ಳ, ಎಲಿಯೂರು, ಲಕ್ಕೀಸಾಗರ, ಚಿಕ್ಕಸಂದ್ರ, ಬ್ರಹ್ಮಸಂದ್ರ, ಬೋರಸಂದ್ರ, ಮಾಗೋಡು, ದೊಡ್ಡ ಅಗ್ರಹಾರ, ಭೂಪಸಂದ್ರ, ಚಂಗಾವರ, ಶಿರಾ ರಾಮಲಿಂಗಪುರ, ಬುಕ್ಕಾಪಟ್ಟಣ ಮತ್ತು ಚಿರತಹಳ್ಳಿ ಮುಂತಾದೆಡೆಗಳಲ್ಲಿ ದೊಡ್ಡ ಕೆರೆಗಳಿವೆ.

## ಅರಣ್ಯ ಸಂಪತ್ತು

ನಮ್ಮ ಜೀವಿವೈವಿಧ್ಯದಲ್ಲಿ ಅರಣ್ಯ ಮತ್ತು ಮಾನವನ ಸಂಬಂಧ ಅನನ್ಯವಾದುದು. ಆರಂಭದಿಂದಲೂ ಮಾನವ ತನ್ನ ಬದುಕಿಗೆ ಅರಣ್ಯವನ್ನು ಅವಲಂಬಿಸಿಯೇ ಜೀವಿಸಿದ್ದಾನೆ. ಪ್ರಕೃತಿದತ್ತ ಅರಣ್ಯ ಮಾನವನ ಭೌತಿಕ ಅಗತ್ಯಗಳನ್ನು ಪೂರೈಸುವುದರೊಂದಿಗೆ, ಶುದ್ಧ ಗಾಳಿ, ನೀರು, ಮಣ್ಣಿನ ಫಲವತ್ತತೆ, ಭೂಮಿಯ ತೇವಾಂಶವನ್ನು ಹಿಡಿದಿಡುತ್ತದೆ. ತುಮಕೂರು ಜಿಲ್ಲೆಯು ೯೧೦ ಚ.ಕಿ.ಮೀ.ಅರಣ್ಯದಿಂದ ಕೂಡಿದ್ದು. ಒಟ್ಟಾರೆ ಶೇ ೮.೬ರಷ್ಟು ಅರಣ್ಯ ಪ್ರದೇಶವಿದೆ.



ಆದರೆ ಶಿರಾ ತಾಲ್ಲೂಕು ೧೫೩೮.೦೧ ಚ.ಕಿ.ಮೀ ಭೌಗೋಳಿಕ ವಿಸ್ತೀರ್ಣ ಹೊಂದಿದ್ದು, ಇದರಲ್ಲಿ ೪೬.೨೯ ಚ.ಕಿ.ಮೀ.ಅಂದರೆ ಕೇವಲ ಶೇ ೨.೯೯ ರಷ್ಟು ಅತಿ ಕಡಿಮೆ ಅರಣ್ಯ ಹೊಂದಿದ ತಾಲ್ಲೂಕಾಗಿರುತ್ತದೆ. ಮುದಿಗೆರೆಕಾವಲ್ ಮೀಸಲು ಅರಣ್ಯ ೩೦೨೪ ಎಕರೆ, ರಂಗಾನಾಥಪುರ ಮೀಸಲು ಅರಣ್ಯವು ೭೪೧೫.೩೮ ಎಕರೆ, ಸೀಬಿ ಅರಣ್ಯಪ್ರದೇಶವು ೪೫೬ ಎಕರೆ ಪ್ರದೇಶ ಹೊಂದಿದ್ದು, ಒಟ್ಟಾರೆ ೧೧೪೯.೨೭ ಎಕರೆ ಮೀಸಲು ಅರಣ್ಯವನ್ನು ಹೊಂದಿದೆ.ಶಿರಾ ತಾಲ್ಲೂಕಿನ ಅರಣ್ಯಗಳು ಬಯಲು ಸೀಮೆಯ ಉಷ್ಣವಲಯದ ಕಾಡುಗಳು. ಇವು ಸಾಮಾನ್ಯವಾಗಿ ಬೆಟ್ಟಗಳ ತಪ್ಪಲುಗಳಲ್ಲಿ ಕಂಡುಬರುತ್ತವೆ. ಉದಾಹರಣೆಗೆ ಬುಕ್ಕಾಪಟ್ಟಣದ ಸುತ್ತಲು ಇರುವ ಗುಡ್ಡಕಾಡುಗಳಲ್ಲಿ ಹರಡಿರುವ ಕಾಡುಗಳು ಬೆಟ್ಟದ ತಪ್ಪಲಲ್ಲಿ ದಟ್ಟವಾಗಿಯೂ, ಇತರ ಪ್ರದೇಶಗಳಲ್ಲಿ ಕುರುಚಲಾಗಿಯೂ ಇವೆ. ಈ ಪ್ರದೇಶದಲ್ಲಿ ಮಳೆ ಬೀಳುವುದು ಕೂಡ ಕಡಿಮೆಯಾಗಿರುವುದರಿಂದ ಇಲ್ಲಿನ ಕಾಡಿನ ಮರಗಳು ೨೫ ಅಡಿಗಳಿಗಿಂತ ಹೆಚ್ಚು ಎತ್ತರಕ್ಕೆ ಬೆಳೆಯುವುದಿಲ್ಲ. ಜಾಲಾರಿ, ಶ್ರೀಗಂಧ, ಕಗ್ಗಲಿ, ಕಕ್ಕೆ, ಮುಂತಾದ ಮರಗಳು ಇಲ್ಲಿ ವಿಶೇಷವಾಗಿ ಕಂಡುಬರುತ್ತವೆ.

## ವನ್ಯ ಮೃಗಗಳು

ಶಿರಾ ತಾಲ್ಲೂಕಿನ ಅರಣ್ಯಗಳು ಅನೇಕ ಜಾತಿಯ ವನ್ಯಮೃಗಗಳ ಆವಾಸ ಸ್ಥಾನವಾಗಿದ್ದು. ಈ ಕಾಡುಗಳಲ್ಲಿ ಕರಡಿ, ನರಿ, ತೋಳಗಳಂತಹ ಪ್ರಾಣಿಗಳಲ್ಲದೆ ನವಿಲು, ಕೋಗಿಲೆಗಳಂತಹ ಪಕ್ಷಿಗಳನ್ನು ವಿಶೇಷವಾಗಿ ಕಾಣಬಹುದು.

## ಖನಿಜ ಸಂಪತ್ತು

ಈ ತಾಲ್ಲೂಕಿನ ಮಣ್ಣು ಅನೇಕ ರೀತಿಯ ಖನಿಜ ನಿಕ್ಷೇಪಗಳನ್ನು ಒಳಗೊಂಡಿದ್ದು, ತಾಲ್ಲೂಕಿನ ಅಜ್ಜೇನಹಳ್ಳಿ ಪ್ರದೇಶದಲ್ಲಿ ಚಿನ್ನದ ನಿಕ್ಷೇಪ ಕೂಡ ಇರುವುದು ವಿಶೇಷವಾಗಿದೆ.

## ಐತಿಹಾಸಿಕ ಹಿನ್ನೆಲೆ

೧೮೬೨ ರ ವರೆಗೆ ಚಿತ್ರದುರ್ಗ ವಿಭಾಗದಲ್ಲಿದ್ದು ೧೮೬೨ರಲ್ಲಿ ಸ್ವತಂತ್ರ ಜಿಲ್ಲೆಯಾದ ತುಮಕೂರು ಜಿಲ್ಲೆಯ ಪ್ರಾಚೀನತೆಯನ್ನು ಗಮನಿಸಿದರೆ ಶಿಲಾಯುಗದ ಕಾಲದಿಂದಲೂ ಈ ಜಿಲ್ಲೆ ಜನವಸತಿಯ ಕೇಂದ್ರವಾಗಿತ್ತೆಂದು ತಿಳಿದುಬರುತ್ತದೆ. ಕರ್ನಾಟಕದಲ್ಲಿ ಅತಿ ಹೆಚ್ಚು ಅಂದರೆ ಸುಮಾರು ೨೬೬

ಶಿಲಾಯುಗದ ನೆಲೆಗಳನ್ನು ಈ ಜಿಲ್ಲೆ ಹೊಂದಿದ್ದು. ಅವುಗಳಲ್ಲಿ ಕಿಬ್ಬನಹಳ್ಳಿ, ಬಿಳಿಗೆರೆ, ಬಾಣಸಂದ್ರ, ನಾಗಲಾಪುರ, ಮಿಡಿಗೇಶಿ, ವೈ. ಎನ್ ಹೊಸಕೋಟೆ, ಕತ್ತಿರಾಜನಪುರ, ನಿಡುಗಲ್ಲು, ಮೊದಲಾದ ಅನೇಕ ಸ್ಥಳಗಳಲ್ಲಿ ಶಿಲಾಯುಗದ ಅನೇಕ ಅವಶೇಷಗಳು ದೊರೆತಿದ್ದು, ಇವು ತುಮಕೂರು ಜಿಲ್ಲೆ ಸ್ಪಷ್ಟವಾಗಿ ಶಿಲಾಯುಗದ ಮಾನವನ ಸಂಸ್ಕೃತಿಯ ನೆಲೆಗಳಲ್ಲಿ ಒಂದಾಗಿತ್ತೆಂಬ ಅಂಶವನ್ನು ಸ್ಪಷ್ಟಪಡಿಸುತ್ತವೆ.

ಶಿರಾ ತಾಲ್ಲೂಕಿನ ಬೂದಿಗುಡ್ಡ, ಹುಯಿಲ್‌ದೊರೆ ಬುಕ್ಕಾಪಟ್ಟಣ, ಮದಲೂರು, ಹೊಳಕಲ್ಲು ಬೆಟ್ಟಗಳಲ್ಲಿ ಅನೇಕ ಪ್ರಾಗೈತಿಹಾಸಿಕ ನೆಲೆಗಳು ಕಂಡುಬರುತ್ತವೆ, ಬೂದಿಗುಡ್ಡದಲ್ಲಿ ಆದಿ ಹಾಗೂ ಹಳೆಯ ಶಿಲಾಯುಗದ ಶಿಲೋಪಕರಣಗಳು, ಮಧ್ಯಶಿಲಾಯುಗಕ್ಕೆ ಸೇರಿದ ಉಪಕರಣಗಳು ಹಾಗೂ ನೂತನ ಶಿಲಾಯುಗಕ್ಕೆ ಸೇರಿದ ಸೂಕ್ಷ್ಮ ಶಿಲೋಪಕರಣದ ಮೂಲ ಶಿಲಾಗಟ್ಟಿಯೊಂದು ದೊರೆತಿದೆ. ಬುಕ್ಕಾಪಟ್ಟಣದಲ್ಲಿ ನೂತನ ಶಿಲಾಯುಗಕ್ಕೆ ಸೇರಿದ ವಸತಿ ನೆಲೆಯೊಂದು ಇದ್ದು, ಅಲ್ಲಿ ಕಪ್ಪು, ಕೆಂಪು ಮಡಕೆಗಳ ಭಾಗಗಳು ದೊರೆತಿವೆ. ಒಳಕಲ್ಲು ಬೆಟ್ಟದಲ್ಲಿ ಸೂಕ್ಷ್ಮ ಶಿಲಾಯುಗದ ನೆಲೆಯೊಂದು ಇದ್ದು, ಅಲ್ಲಿ ವಿವಿಧ ಮಾದರಿಯ ಉಪಕರಣಗಳು ಹಾಗೂ ಮಡಕೆ ಭಾಗಗಳು ದೊರೆತಿವೆ.

ಐತಿಹಾಸಿಕವಾಗಿ ಗಮನಿಸಿದರೆ ಬ್ರಿಟಿಷರ ನಿಯಂತ್ರಣಕ್ಕೆ ಬರುವ ಮೊದಲು ತುಮಕೂರು ಜಿಲ್ಲೆ ಹಾಗೂ ಅದರ ಭಾಗವೇ ಆದ ಶಿರಾ ಪ್ರಾಂತ್ಯ ಪ್ರಾಚೀನ ರಾಜವಂಶಗಳಾದ ಶಾತವಾಹನರು, ನೊಳಂಬರು, ತಲಕಾಡಿನ ಗಂಗರು, ತಂಜಾವೂರಿನ ಚೋಳರು, ಮಾನ್ಯಖೇಟದ ರಾಷ್ಟ್ರಕೂಟರು, ದೋರಸಮುದ್ರದ ಹೊಯ್ಸಳರು, ವಿಜಯನಗರದ ಅರಸರು, ಮೈಸೂರು ಒಡೆಯರ ಆಳ್ವಿಕೆಗೆ ಒಳಪಟ್ಟಿತ್ತು. ವಿಜಯನಗರದ ಅರಸರ ನಂತರ ಶಿರಾದಲ್ಲಿ ಪಾಳೆಗಾರರು ಮತ್ತು ನವಾಬರು ಏಳಿಗೆ ಹೊಂದಿದರು.

ಶಿರಾ ಮಧುಗಿರಿ ರಸ್ತೆಯಲ್ಲಿ ತನ್ನ ಗತಕಾಲದ ವೈಭವ ಕಳೆದುಕೊಂಡು ಅಸ್ತಿ ಪಂಜರವಾಗಿ ಉಳಿದಿರುವ ಕಲ್ಲಿನ ಕೋಟೆಯಿಂದಲೇ ಇಲ್ಲಿನ ಐತಿಹಾಸಿಕ ಹೆಜ್ಜೆ ಗುರುತುಗಳು ಸ್ಪಷ್ಟವಾಗಿ ರೂಪುಗೊಳ್ಳುತ್ತವೆ. ನಿಡಗಲ್ಲು ಸಂಸ್ಥಾನದ



ಆಳ್ವಿಕೆಯ ಸಂದರ್ಭದಲ್ಲಿ ಸಮಕಾಲಿನ ರತ್ನಗಿರಿಯ ನಾಯಕ ಶಿರಾ ನಗರವನ್ನು ಆಳ್ವಿಕೆ ಮಾಡುತ್ತಿದ್ದು ಆತನೇ ಈ ಕೋಟೆಯನ್ನು ನಿರ್ಮಿಸಿದನೆಂದು ಹೇಳಲಾಗುತ್ತದೆ. ಆದರೂ ನಂತರ ಅನೇಕ ಪರಿಷ್ಕಾರಗಳನ್ನು ಕಾಲಕಾಲಕ್ಕೆ ಪಡೆದುಕೊಂಡ ಈ ಕೋಟೆಯ ನಿರ್ವಾಣ ಕಾರ್ಯ ರತ್ನಗಿರಿ ರಂಗಪ್ಪನಾಯಕನಿಂದ ಶಿರಾ ಬಿಜಾಪುರದ ಸುಲ್ತಾನರ ವಶವಾದ ನಂತರ ಅಂದರೆ ೧೬೫೦ರ ಸುಮಾರಿಗೆ ಪೂರ್ಣಗೊಂಡಂತೆ ಕಂಡು ಬರುತ್ತದೆ.

೧೬೩೭ ರಲ್ಲಿ ಬಿಜಾಪುರದ ಸುಲ್ತಾನನ ವಶವಾದ ಶಿರಾಪ್ರಾಂತ್ಯ ಮಲ್ಲಿಕ್ ರಿಹಾನ್ ಎಂಬ ಸುಬೇದಾರನ ಆಳ್ವಿಕೆಗೆ ಸೇರಿತೆಂದೂ, ೧೬೮೬ರಲ್ಲಿ ಮೊಗಲರು ಬಿಜಾಪುರವನ್ನು ವಶಪಡಿಸಿಕೊಂಡ ನಂತರ ಬಸವಾಪಟ್ಟಣ, ಬೂದಿಹಾಳು, ಶಿರಾ, ಪೆನುಗೊಂಡ, ದೊಡ್ಡಬಳ್ಳಾಪುರ, ಹೊಸಕೋಟೆ ಮತ್ತು ಕೋಲಾರಗಳನ್ನು ಒಳಗೊಂಡ ಏಳು ಪರಗಣಗಳಿಗೆ ಶಿರಾ ಆಡಳಿತ ಕೇಂದ್ರವಾಯಿತೆಂದೂ ತಿಳಿದುಬರುತ್ತದೆ. ನಂತರ ಮರಾಠರ ವಶವಾದ ಶಿರಾವನ್ನು ೧೭೭೪ರಲ್ಲಿ ಗೆದ್ದು ಹೊಂಡ ಟಿಪ್ಪು ಸುಲ್ತಾನನು ಮೈಸೂರಿನಲ್ಲಿ ವಿಲೀನಗೊಳಿಸಿಕೊಂಡನು. ೧೭೯೯ರ ೪ನೇ ಆಂಗ್ಲೋ ಮೈಸೂರು ಯುದ್ಧದಲ್ಲಿ ಟಿಪ್ಪು ಹತನಾದಾಗ ಶಿರಾ ಬ್ರಿಟಿಷರ ಮೂಲಕ ಮೈಸೂರಿನ ದೊರೆ ಮುಮ್ಮಡಿ ಕೃಷ್ಣರಾಜ ಒಡೆಯರಿಗೆ ಸೇರಿತು.

ಹೀಗೆ ಅನೇಕ ರಾಜವಂಶಗಳ ಆಳ್ವಿಕೆಯ ನಂತರ ಶಿರಾ ಅಂತಿಮವಾಗಿ ಮೈಸೂರು ಅರಸರ ಆಳ್ವಿಕೆಗೆ ಒಳಪಟ್ಟಿದ್ದು ಶಿರಾ ತಾಲ್ಲೂಕಿನ ಜನತೆಗೆ ಸಂತೋಷವನ್ನುಂಟು ಮಾಡಿತಾದರೂ ಅವರ ಆ ಸಂತೋಷ ಬಹುಕಾಲ ಉಳಿಯಲಿಲ್ಲ. ಇದಕ್ಕೆ ಮೈಸೂರು ಅರಸರು ಬ್ರಿಟಿಷರ ನಿಯಂತ್ರಣದಲ್ಲಿದ್ದು, ಆಡಳಿತದಲ್ಲಿ ಬ್ರಿಟಿಷರ ಹಸ್ತಕ್ಷೇಪ ಹೆಚ್ಚಾದುದು ಪ್ರಮುಖ ಕಾರಣವಾಯಿತು. ಬ್ರಿಟಿಷರ ಆರ್ಥಿಕ ಶೋಷಣೆ ಮತ್ತು ದೌರ್ಜನ್ಯಗಳಿಂದ ನೊಂದ ಜನತೆ ವಿದೇಶಿ ದಾಸ್ಯದಿಂದ ಹೊರಬರಲು ನಿಧಾನವಾಗಿ ಚಳುವಳಿಯ ಹಾದಿ ಹಿಡಿದುದು ಶಿರಾವನ್ನೂ ಒಳಗೊಂಡಂತೆ ಇಡೀ ತುಮಕೂರು ಜಿಲ್ಲೆಯಲ್ಲಿ ಸ್ವಾತಂತ್ರ್ಯ ಚಳುವಳಿಯ ಆರಂಭಕ್ಕೆ ಮುನ್ನುಡಿಯಾಯಿತು.

## ಆರಂಭದ ಚಳುವಳಿಗಳು

೧೯೨೦ರಲ್ಲಿ ನಾಗಪುರದಲ್ಲಿ ನಡೆದ ಕಾಂಗ್ರೆಸ್ ಅಧಿವೇಶನ ದೇಶದ ಸ್ವಾತಂತ್ರ್ಯ ಚಳುವಳಿಯ ಇತಿಹಾಸದಲ್ಲಿ ಒಂದು ಮೈಲಿಗಲ್ಲಾದಂತೆ. ತುಮಕೂರು ಜಿಲ್ಲೆಯಲ್ಲಿ ನಡೆದ ಸ್ವಾತಂತ್ರ್ಯ ಚಳುವಳಿಯ ಇತಿಹಾಸದಲ್ಲೂ ಒಂದು ಪ್ರಮುಖ ಮೈಲಿಗಲ್ಲಾಗಿತ್ತು. ಇದರಲ್ಲಿ ರಾಷ್ಟ್ರೀಯ ಕಾಂಗ್ರೆಸ್ ಮೊಟ್ಟ ಮೊದಲ ಬಾರಿಗೆ ಪ್ರಾಂತೀಯ ಕಾಂಗ್ರೆಸ್‌ಗಳ ರಚನೆಗೆ ಅನುಮತಿ ನೀಡಿತು. ಅದರಂತೆ ೧೯೨೧ರಲ್ಲಿ ರಾಜ್ಯಾದ್ಯಂತ ಅನೇಕ ಕಾಂಗ್ರೆಸ್ ಕಮಿಟಿಗಳು ಅಸ್ತಿತ್ವಕ್ಕೆ ಬಂದವು. ಅವುಗಳಲ್ಲಿ ತುಮಕೂರು ಕಾಂಗ್ರೆಸ್ ಕಮಿಟಿ ಕೂಡ ಒಂದಾಗಿದ್ದು, ಇದರ ಸಂಸ್ಥಾಪಕ ಅಧ್ಯಕ್ಷರಾಗಿ ಕೆ.ರಂಗೈಯ್ಯಂಗಾರ್ ಆಯ್ಕೆಗೊಂಡರೆ ತಾಳಕೆರೆ ಸುಬ್ರಹ್ಮಣ್ಯ ಪ್ರಪ್ರಥಮ ಕಾರ್ಯದರ್ಶಿಯಾಗಿ ಜಿಲ್ಲೆಯಲ್ಲಿ ರಾಷ್ಟ್ರೀಯ ರಚನಾತ್ಮಕ ಕಾರ್ಯಕ್ರಮಗಳಿಗೆ ಚಾಲನೆ ನೀಡಿದರು. ಈ ನಾಯಕರಿಗೆ ಬಿ.ಸಿ. ನಂಜುಂಡಯ್ಯ ಆರ್.ಎಸ್ ಆರಾಧ್ಯ ಮುಂತಾದವರು ಬೆನ್ನೆಲುಬಾಗಿ ನಿಂತು ಪ್ರೋತ್ಸಾಹಿಸುವುದರೊಂದಿಗೆ ತುಮಕೂರು ಜಿಲ್ಲೆಯಲ್ಲಿ ಸ್ವಾತಂತ್ರ್ಯ ಹೋರಾಟದ ಚಟುಟಿಕೆಗಳು ಅಧಿಕೃತವಾಗಿ ಆರಂಭಗೊಂಡವು. ೧೯೨೨ರಲ್ಲಿ ಗಯಾದಲ್ಲಿ ನಡೆದ ಭಾರತ ರಾಷ್ಟ್ರೀಯ ಕಾಂಗ್ರೆಸ್‌ನ ಅಧಿವೇಶನದಲ್ಲಿ ತುಮಕೂರು ಜಿಲ್ಲೆಯ ಪರವಾಗಿ ಭಾಗವಹಿಸಿದ್ದ ಕೆ. ರಂಗೈಯ್ಯಂಗಾರರು ಅಧಿವೇಶನದಿಂದ ಹಿಂತಿರುಗಿದ ಮೇಲೆ ರಾಷ್ಟ್ರೀಯ ಕಾಂಗ್ರೆಸಿನ ಕಾರ್ಯಕ್ರಮಗಳಾದ ಸತ್ಯಾಗ್ರಹ ಮತ್ತು ಅಸಹಕಾರ ಚಟುವಟಿಕೆಗಳ ಬಗ್ಗೆ ಪ್ರಚಾರ ಮಾಡುವ ಮೂಲಕ ಜಿಲ್ಲೆಯಲ್ಲಿ ಬ್ರಿಟಿಷರ ವಿರುದ್ಧ ಜನಜಾಗೃತಿಯನ್ನುಂಟುಮಾಡಿದರು. ಇದೇ ಸಂದರ್ಭದಲ್ಲಿ ಕೀರ್ತನಕಾರರಾಗಿದ್ದ 'ಜಯರಾಮಾಚಾರ್ಯ ಕೊಪ್ಪಳ'ರವರು ಸ್ವಾತಂತ್ರ್ಯ ಹೋರಾಟದ ಬಗೆಗಿನ ಕೀರ್ತನೆಗಳನ್ನು ರಚಿಸಿ ಹಾಡುವ ಮೂಲಕ ತುಮಕೂರು ಮತ್ತು ಮಧುಗಿರಿ ಭಾಗಗಳಲ್ಲಿ ಸ್ವಾತಂತ್ರ್ಯ ಹೋರಾಟದ ಬಗ್ಗೆ ಜನಜಾಗೃತಿಯನ್ನುಂಟು ಮಾಡಿದರು.ಇವರ ಕೀರ್ತನೆಗಳಿಂದ ಪ್ರಭಾವಿತರಾದ ಮಧುಗಿರಿಯ ಜನರು ಬಾಲಗಂಗಾಧರತಿಲಕರ ನೆನಪಿಗಾಗಿ ಮಧುಗಿರಿಯಲ್ಲಿ ಸಭಾಭವನವೊಂದನ್ನು ನಿರ್ಮಿಸುವ ಮೂಲಕ ರಾಷ್ಟ್ರ ಪ್ರೇಮ ಮೆರೆದರು.

ತಾವು ಆರಂಭಿಸಿದ ಸ್ವದೇಶಿ ಚಳುವಳಿಯ ಭಾಗವಾದ ಸ್ವದೇಶಿ ವಸ್ತುಗಳ ಬಳಕೆಯ ಪ್ರಚಾರ ಕೈಗೊಂಡ ಗಾಂಧೀಜಿ ಖಾದಿ ಪ್ರಚಾರಕ್ಕಾಗಿ ೧೯೨೭ರ ಜುಲೈ ೧೪ ರಂದು ತುಮಕೂರಿಗೆ ಆಗಮಿಸಿದರು. ಆ ಸಂದರ್ಭದಲ್ಲಿ



ತುಮಕೂರು ಪುರಸಭೆಯ ಮೊಟ್ಟಮೊದಲ ಚುನಾಯಿತ ಅಧ್ಯಕ್ಷರಾಗಿದ್ದ ಕೆ.ರಂಗೈಯ್ಯಂಗಾರ್ ನೇತೃತ್ವದ ಸ್ವಾಗತ ಸಮಿತಿ ಅವರನ್ನು ಗೌರವದಿಂದ ಸ್ವಾಗತಿಸಿತು. ಮಹಾತ್ಮ ಗಾಂಧೀಜಿಯವರ ಜೊತೆ ಕಸ್ತೂರ ಬಾ ಗಾಂಧಿ, ಗಂಗಾಧರರಾವ್ ದೇಶಪಾಂಡೆ, ಮಹದೇವ ದೇಸಾಯಿ, ಮಣಿ ಬೆಹನ್ ಪಟೇಲ್, ದೇವದಾಸ್ ಗಾಂಧಿ ಮತ್ತು ಬೃದುಲ್ಲಾ ಸಾರಾಬಾಯ್ ಕೂಡ ಬಂದಿದ್ದರು. ಅಂದು ಸಾರ್ವಜನಿಕ ಸಭೆಯನ್ನುದ್ದೇಶಿಸಿ ಮಾತನಾಡಿದ ನಂತರ ತುಮಕೂರಿನ ಆದಿಕರ್ನಾಟಕ ಜನರಿದ್ದ ಕೇರಿಗೆ ಭೇಟಿ ನೀಡಿದ ಗಾಂಧಿ ಗೋಮಾಂಸ ಸೇವಿಸುವುದು ಮತ್ತು ಹೆಂಡ ಕುಡಿಯುವುದನ್ನು ಬಿಡುವಂತೆ ಭಾಷಣ ಮಾಡಿ ಸ್ವಾತಂತ್ರ್ಯ ಚಳುವಳಿಯಲ್ಲಿ ಪಾಲ್ಗೊಳ್ಳುವಂತೆ ಅವರನ್ನೂ ಪ್ರೇರೇಪಿಸಿದರು. ನಂತರ ಮಧುಗಿರಿಗೆ ಭೇಟಿ ನೀಡಿದ ಗಾಂಧೀಜಿ ರಾತ್ರಿ ತುಮಕೂರಿಗೆ ವಾಪಸ್ ಬಂದು ತಂಗಿದ್ದು ಮರುದಿನ ಬೆಂಗಳೂರಿಗೆ ತೆರಳಿದರು. ಮಹಾತ್ಮ ಗಾಂಧೀಜಿಯವರು ತುಮಕೂರು ಜಿಲ್ಲೆಗೆ ಬೇಟಿ ನೀಡಿದ ನಂತರ ಜಿಲ್ಲೆಯಲ್ಲಿ ರಚನಾತ್ಮಕ ಕಾರ್ಯಕ್ರಮಗಳಿಗೆ ಹೆಚ್ಚು ಮಹತ್ವ ಬಂದಿತು. ಮಧುಗಿರಿಯಲ್ಲಿ ಗಾಂಧೀಜಿ ಮಾಡಿದ ಭಾಷಣದಿಂದ ಪ್ರಭಾವಿತರಾದ ಪಾವಗಡ ತಾಲ್ಲೂಕಿನ ನಂಜುಂಡರಾವ್ ರತಂಗಪಾಣಿ, ನರಸಿಂಗರಾವ್ ಮೊದಲಾದವರು ಪಾವಗಡದಲ್ಲಿ ತಾಲ್ಲೂಕು ಕಾಂಗ್ರೆಸ್ ಕಮಿಟಿಯನ್ನು ಸ್ಥಾಪಿಸಿ ಅದರ ಅಧ್ಯಕ್ಷರಾದ ನಂಜುಂಡರಾವ್ ನೇತೃತ್ವದಲ್ಲಿ ತಕಲಿ ಮತ್ತು ಚರಕಗಳಿಂದ ನೂಲು ತೆಗೆಯುವುದನ್ನು ಆರಂಭಿಸಿದರು. ತಾಲ್ಲೂಕಿನ ವೈ.ಎಸ್ ಹೊಸಕೋಟೆಯಲ್ಲಿ ವಿದೇಶಿ ವಸ್ತುಗಳ ಬಹಿಷ್ಕಾರ ಚಳುವಳಿಯನ್ನು ಬಿರುಸಿನಿಂದ ಆರಂಭಿಸಿದರು. ತಾಲ್ಲೂಕಿನ ವೈ. ಎಸ್. ಹೊಸಕೋಟೆಯಲ್ಲಿ ವಿದೇಶಿ ವಸ್ತ್ರ ದಹನ ಕಾರ್ಯವನ್ನು ಹಮ್ಮಿಕೊಂಡಿದ್ದಾಗ ಇ. ಎಸ್. ವೆಂಕಟೇಶಗುಪ್ತರು ತಮ್ಮ ಮೈ ಮೇಲೆ ಧರಿಸಿದ್ದ ವಿದೇಶಿ ಕೋಟನ್ನು ಕಳಚಿ ಬೆಂಕಿಗೆ ಅರ್ಪಿಸಿದರಲ್ಲದೆ ಇನ್ನು ಮುಂದೆ ವಿದೇಶಿ ಬಟ್ಟೆಗಳನ್ನು ಧರಿಸುವುದಿಲ್ಲವೆಂದು ಪ್ರತಿಜ್ಞೆಮಾಡಿ ಜೀವನಪರ್ಯಂತ ಅದರಂತೆಯೇ ನಡೆದರು. ತುರುವೇಕೆರೆ ತಾಲ್ಲೂಕಿನ ಶ್ರೀರಾಮಪುರದ ಎಸ್. ಬಿ. ನಂಜೇಗೌಡರಂತೂ ಗಾಂಧೀಜಿಯವರ ದರ್ಶನಮಾಡಿ ಅವರ ಮಾತುಗಳನ್ನು ಕೇಳಿದ ನಂತರ ಮಹಾತ್ಮ ರ ಪ್ರಭಾವಕ್ಕೊಳಗಾಗಿ ಅವರಂತೆಯೇ ತಾವು ಕೂಡ ಮೈತುಂಬ ಬಟ್ಟೆ ಧರಿಸುವುದನ್ನು ತ್ಯಜಿಸಿ, ಕೇವಲ ತುಂಡು ಬಟ್ಟೆಯೊಂದನ್ನು

ಸೊಂಟಕ್ಕೆ ಸುತ್ತಿಕೊಂಡು, ಮತ್ತೊಂದನ್ನು ಹೆಗಲ ಮೇಲೆ ಹೊದ್ದು, ಅರೆನಗ್ನ ಪಕೀರನಂತೆಯೇ ಕೊನೆಯವರೆಗೂ ಜೀವನ ನಡೆಸಿದರು.

ತುಮಕೂರು ಜಿಲ್ಲೆಯಲ್ಲಿ ನಡೆದ ಸ್ವಾತಂತ್ರ್ಯ ಹೋರಾಟದಲ್ಲಿ ಪಾನನಿರೋಧ, ಧ್ವಜಸತ್ಯಾಗ್ರಹ, ಅರಣ್ಯ ಸತ್ಯಗ್ರಹ, ಕ್ವಿಟ್ ಇಂಡಿಯಾ ಚಳುವಳಿ ಮತ್ತು ಮೈಸೂರು ಚಲೋ ಚಳುವಳಿಗಳು ಪ್ರಮುಖವಾಗಿವೆ. ಈ ಎಲ್ಲ ಚಳುವಳಿಗಳು ಜಿಲ್ಲೆಯ ಎಲ್ಲ ಭಾಗಗಳಲ್ಲಿ ಪರಿಣಾಮಕಾರಿಯಾಗಿ ನಡೆದರೂ ಶಿರಾ ತಾಲ್ಲೂಕಿನಲ್ಲಿ ಮಾತ್ರ ೧೯೩೪ರ ವರೆಗೆ ತೀವ್ರ ಸ್ವರೂಪದ ಚಳುವಳಿಗಳೇನೂ ನಡೆಯಲೇ ಇಲ್ಲ. ಆದರೆ ೧೯೩೪ರಲ್ಲಿ ಮಹಾತ್ಮ ಗಾಂಧೀಜಿ ಜಿಲ್ಲೆಗೆ ೨ನೇ ಬಾರಿ ಬೇಟಿ ನೀಡಿದ ನಂತರ ಅವರ ಸ್ಫೂರ್ತಿಯುತ ಮಾತುಗಳಿಂದ ಪ್ರೇರೇಪಿತರಾದ ಶಿರಾ ತಾಲೂಕಿನ ಜನತೆ ನಂತರದ ದಿನಗಳಲ್ಲಿ ನಡೆದ ಎಲ್ಲ ಚಳುವಳಿಗಳಲ್ಲಿ ಅತ್ಯಂತ ಹುಮ್ಮಸ್ಸಿನಿಂದ ಭಾಗವಹಿಸಿದರು. ೧೯೩೭ ರಲ್ಲಿ ಶಿರಾ ತಾಲ್ಲೂಕು ಕಾಂಗ್ರೇಸ್ ಕಮಿಟಿ ಅಸ್ತಿತ್ವಕ್ಕೆ ಬಂದ ನಂತರವಂತೂ ನಾಯಕರಾದ ಟಿ. ತಾರೇಗೌಡ, ಎಸ್ ಸಿದ್ದಪ್ಪ ಚನ್ನಬಸವಯ್ಯ, ಬಿ.ಎನ್ ರಾಮೇಗೌಡ ಸಿ. ಜೆ, ಮುಕ್ಕಣ್ಣಪ್ಪ, ಕರಿಬಸವಯ್ಯ, ಗುಂಡೂರಾವ್ ಮುಂತಾದವರ ನೇತೃತ್ವದಲ್ಲಿ ಜನತೆ ಚಳುವಳಿಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡರು.

## ಶಿವಪುರ ಧ್ವಜ ಸತ್ಯಾಗ್ರಹ

ಮೈಸೂರು ಸಂಸ್ಥಾನದಲ್ಲಿ ನಡೆದ ಸ್ವಾತಂತ್ರ್ಯ ಸಂಗ್ರಾಮದ ಇತಿಹಾಸದಲ್ಲಿ ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕಿನ ಶಿವಪುರದಲ್ಲಿ ನಡೆದ ಧ್ವಜ ಸತ್ಯಾಗ್ರಹವು ಅತ್ಯಂತ ಚಿರಸ್ಮರಣೀಯ ಘಟನೆಗಳಲೊಂದಾಗಿದೆ. ತದನಂತರದ ದಿನಗಳಲ್ಲಿ ಸ್ವಾತಂತ್ರ್ಯ ಚಳುವಳಿಗೆ ಜನಸಾಮಾನ್ಯರನ್ನು ಸೆಳೆಯುವಲ್ಲಿ ಯಶಸ್ವಿಯಾದ ಈ ಸತ್ಯಾಗ್ರಹವು ಮೈಸೂರು ಸಂಸ್ಥಾನದಲ್ಲಿ ಜವಾಬ್ದಾರಿ ಸರ್ಕಾರದ ಆರಂಭಕ್ಕೆ ಅಡಿಗಲ್ಲಾಯಿತೆಂದರೂ ತಪ್ಪಾಗಲಾರದು. ಹರಿಪುರದಲ್ಲಿ ನಡೆದ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನದಲ್ಲಿ ತೆಗೆದುಕೊಂಡ ತೀರ್ಮಾನದಂತೆ ೧೯೩೭ರ ಅಕ್ಟೋಬರ್ ೧೮ರಂದು ಅಸ್ತಿತ್ವಕ್ಕೆ ಬಂದ ಮೈಸೂರು ಸಂಸ್ಥಾನ ಕಾಂಗ್ರೆಸ್ ೧೯೩೮ ಫೆಬ್ರವರಿ ೨೮ ಮಹಾಶಿವರಾತ್ರಿಯಂದು ಅಧಿಕೃತವಾಗಿ ಕಾರ್ಯರಂಭ ಮಾಡಿತು. ಮೈಸೂರು ಕಾಂಗ್ರೆಸ್‌ನ ಮೊದಲ ಕಾರ್ಯಕಾರಿ ಸಮಿತಿ ಸಭೆ ೧೯೩೮ ಮಾರ್ಚ್ ೧೧ ರಂದು ಟಿ.ಸಿದ್ದಲಿಂಗಯ್ಯನವರ ಅಧ್ಯಕ್ಷತೆಯಲ್ಲಿ



ನಡೆದು ಅದರಲ್ಲಿ ಮೈಸೂರು ಕಾಂಗ್ರೆಸ್ಸಿನ ಮೊದಲ ಅಧಿವೇಶನವನ್ನು ಮದ್ದೂರು ತಾಲ್ಲೂಕಿನ ಶಿವಪುರದ ತಿರುಮಲೇಗೌಡರ ಜಮೀನಿನಲ್ಲಿ ನಡೆಯಬೇಕೆಂದು ತೀರ್ಮಾನಿಸಲಾಯಿತು, ಇದೇ ಸಂದರ್ಭದಲ್ಲಿ ಮೈಸೂರು ಸಂಸ್ಥಾನದ ಮಹಾರಾಜರು ಮಹಾತ್ಮ ಗಾಂಧೀಜಿಯವರು ಮತ್ತು ರಾಷ್ಟ್ರೀಯ ಕಾಂಗ್ರೆಸ್ಸಿನೊಂದಿಗೆ ಅತ್ಯುತ್ತಮ ಬಾಂಧವ್ಯ ಹೊಂದಿದ್ದರೂ ಸ್ಥಳಿಯ ಕಾಂಗ್ರೆಸ್ ನಾಯಕರ ಬಗ್ಗೆ ಮಾತ್ರ ದ್ವೇಷಭಾವನೆ ಹೊಂದಿದ್ದು, ಸಂಸ್ಥಾನದಲ್ಲಿ ಕಾಂಗ್ರೆಸ್ ಅಧಿಕೃತವಾಗಿ ಅಸ್ತಿತ್ವಕ್ಕೆ ಬಂದಿದ್ದರೂ ಅದಕ್ಕೆ ತನ್ನ ಅಧಿಕೃತ ಧ್ವಜವಾದ ತ್ರಿವರ್ಣ ಧ್ವಜವನ್ನು ಹಾರಿಸಲು ಅನುಮತಿ ನೀಡಲಿಲ್ಲ. ಮಹಾರಾಜರ ಈ ಧೋರಣೆಯನ್ನು ವಿರೋಧಿಸಿದ ಮೈಸೂರು ಕಾಂಗ್ರೆಸ್ ೧೯೩೮ರ ಏಪ್ರಿಲ್ ೧೧ ರಿಂದ ೧೩ರ ವರೆಗೆ ಮಂಡ್ಯ ಜಿಲ್ಲೆಯ ಮದ್ದೂರು ಬಳಿಯ ಶಿವಪುರದಲ್ಲಿ ತನ್ನ ಮೊಟ್ಟಮೊದಲ ಅಧಿವೇಶನವನ್ನು ನಡೆಸಲು ತೀರ್ಮಾನಿಸಿ, ಆ ಮೂದಲ ಅಧಿವೇಶನದಲ್ಲಿ ಧ್ವಜಾರೋಹಣ ಮಾಡಲು ನಿರ್ಧರಿಸಿತಲ್ಲದೆ, ಒಂದು ವೇಳೆ ಮೈಸೂರು ಸರ್ಕಾರ ಇದನ್ನು ವಿರೋಧಿಸಿದರೆ ಧ್ವಜಾರೋಹಣವನ್ನೇ ಪ್ರಮುಖ ವಿಷಯವನ್ನಾಗಿ ಇಟ್ಟುಕೊಂಡು ಸಂಸ್ಥಾನದಾದ್ಯಂತ ಸತ್ಯಾಗ್ರಹವೊಂದನ್ನು ನಡೆಸಲು ನಿರ್ಧರಿಸಿ ಜನತೆಗೆ ಕರೆನೀಡಿತು. ಸ್ವಾತಂತ್ರ್ಯ ಸಂಗ್ರಾಮದ ಇತಿಹಾಸದಲ್ಲಿ 'ಧ್ವಜಸತ್ಯಾಗ್ರಹ' ವೆಂಬ ಹೆಸರಿನಿಂದಲೇ ಪ್ರಸಿದ್ಧವಾದ ಈ ಚಳುವಳಿಯಲ್ಲಿ ತುಮಕೂರು ಜಿಲ್ಲೆಯಿಂದಲೂ ದೊಡ್ಡ ಸಂಖ್ಯೆಯ ಚಳುವಳಿಗಾರರು ಭಗವಹಿಸಿದ್ದರು. ಇವರಲ್ಲಿ ಶಿರಾದಿಂದಲೂ ಟಿ.ತಾರೇಗೌಡ, ಬಿ. ಎನ್ ರಾಮೇಗೌಡ, ಸಿ. ಜೆ. ಮುಕ್ಕಣ್ಣಪ್ಪನವರ ನೇತೃತ್ವದಲ್ಲಿ ಅನೇಕ ಚಳುವಳಿಗಾರರು ಭಾಗವಹಿಸಿದ್ದು ಅವರೆಲ್ಲರೂ ಈ ಚಳುವಳಿಯಿಂದ ಹಿಂತಿರುಗಿದ ನಂತರ ತಮ್ಮ ತಮ್ಮ ಸ್ಥಳಗಳಲ್ಲಿಯೇ ನಿತ್ಯವೂ ಧ್ವಜಾರೋಹಣ ಮಾಡುವ ಮೂಲಕ ಚಳುವಳಿಯನ್ನು ಮುಂದುವರೆಸಿದರು.

## ವಿದುರಾಶ್ವತ್ಥ ಧ್ವಜಸತ್ಯಾಗ್ರಹ

ಶಿವಪುರದ ಸತ್ಯಾಗ್ರಹದ ನಂತರ ಸಂಸ್ಥಾನದಲ್ಲಿ ಧ್ವಜ ಸತ್ಯಾಗ್ರಹದ ಮಹತ್ವದ ಅರಿವುಂಟಾಗಿ ನಿರಂತರವಾಗಿ ಸಂಸ್ಥಾನದಾದ್ಯಂತ ಧ್ವಜಾರೋಹಣ ಚಟುವಟಿಕೆಗಳು ನಡೆಯಲಾರಂಭಿಸಿದವು. ಇಂತಹ ಸಂದರ್ಭದಲ್ಲಿಯೇ ಕೋಲಾರ ಜಿಲ್ಲೆಯ ಗೌರಿಬಿದನೂರು ತಾಲ್ಲೂಕಿನ ವಿದುರಾಶ್ವತ್ಥದಲ್ಲಿ ಪ್ರತಿವರ್ಷದ ಏಪ್ರಿಲ್ ತಿಂಗಳಿನಲ್ಲಿ ನಡೆಯುವ ಜಾತ್ರೆಗೆ ಸಾವಿರಾರು ಜನರು ಸೇರುವ

ಅತ್ಯುತ್ತಮ ಅವಕಾಶವನ್ನು ಸದುಪಯೋಗಪಡಿಸಿಕೊಂಡು ದೇಶಭಕ್ತರ ದಿನಾಚರಣೆಯನ್ನು ಆಚರಿಸುವುದರ ಜೊತೆಗೆ ಧ್ವಜಸತ್ಯಾಗ್ರಹವನ್ನು ಕೂಡ ನಡೆಸಲು ಗೌರಿಬಿದನೂರು ತಾಲ್ಲೂಕು ಕಾಂಗ್ರೆಸ್ ಸಮಿತಿ ನಿರ್ಧರಿಸಿತು. ೧೯೩೮ರ ಏಪ್ರಿಲ್ ೧೮ ರಿಂದ ೨೫ರವರೆಗೆ ನಡೆದ ಈ ಜಾತ್ರೆಯಲ್ಲಿ ಧ್ವಜಸತ್ಯಾಗ್ರಹದ ಉದ್ದೇಶದಿಂದ ತುಮಕೂರು ಜಿಲ್ಲೆಯಿಂದಲೂ ಮಾಲಿ ಮರಿಯಪ್ಪ, ಕೆ.ನಂಜುಂಡರಾವ್, ವಿಶ್ವನಾಥಶೆಟ್ಟಿ, ಇ. ಎಸ್. ವೆಂಕಟೇಶಗುಪ್ತ, ಎಸ್. ಬಿ. ನಂಜೇಗೌಡ ಸೇರಿದಂತೆ ದೊಡ್ಡ ಸಂಖ್ಯೆಯ ಸತ್ಯಾಗ್ರಹಿಗಳು ಭಾಗವಹಿಸಿದ್ದು, ಅವರೆಲ್ಲರಿಗೂ ಜಿಲ್ಲೆಯ ಕಾಂಗ್ರೆಸ್ ನಾಯಕರಲ್ಲೊಬ್ಬರಾದ ಶಿರಾದ ಸಿ.ಜೆ ಮುಕ್ಕಣ್ಣಪ್ಪನವರು ಉಚಿತವಾಗಿ ಖಾದಿಬಟ್ಟೆ ವಿತರಿಸಿದರು. ಈ ಸಮಯದಲ್ಲಿ ಕೋಲಾರ ಜಿಲ್ಲಾ ಮ್ಯಾಜಿಸ್ಟ್ರೇಟರಾದ ಅಪ್ಪಾಜಿಗೌಡರು ಜಾತ್ರೆಯನ್ನು ನಿಷೇದಿಸಿ ೧೪೪ನೇ ಸೆಕ್ಷನ್ ಪ್ರಕಾರ ಪ್ರತಿಬಂಧಕಾಜ್ಞೆಯನ್ನು ಜಾರಿಗೊಳಿಸಿದರು.ಆದರೂ ಸತ್ಯಾಗ್ರಹಿಗಳು ೧೯೩೮ರ ಏಪ್ರಿಲ್ ೧೮ರಂದು ಕಲ್ಲೂರು ಸುಬ್ಬರಾಯರ ಅಧ್ಯಕ್ಷತೆಯಲ್ಲಿ ದೇಶಭಕ್ತರ ದಿನಾಚರಣೆಯನ್ನು ಅಲ್ಲಿಯೇ ಶಾಂತ ರೀತಿಯಲ್ಲಿ ಆಚರಿಸಿದರು. ಏಪ್ರಿಲ್ ೧೮ ರಿಂದ ೨೪ರ ವರೆಗೆ ಯಾವುದೇ ಸಮಸ್ಯೆಯಾಗಲಿಲ್ಲ,ಆದರೆ ಏಪ್ರಿಲ್ ೨೫ರಂದು ಗೌರಿಬಿದನೂರು ಕಾಂಗ್ರೆಸ್ ಕಛೇರಿ ಬಳಿ ಧ್ವಜರೋಹಣ ಮಾಡಿ ರಾಷ್ಟ್ರಗೀತೆ ಹಾಡಿದ ನಂತರ ಘೋಷಣೆಗಳನ್ನು ಕೂಗುತ್ತ, ಧ್ವಜ ಹಿಡಿದು ಮೆರವಣಿಗೆಯಲ್ಲಿ ಹೊರಾಟ ಸತ್ಯಾಗ್ರಹಿಗಳು ವಿದುರಾಶ್ವತ್ಥ ತಲುಪಿದಾಗ ತುಮಕೂರು ಜಿಲ್ಲೆಯ ಪ್ರಮುಖ ನಾಯಕರಾದ ಕಲ್ಲೂರು ಸುಬ್ಬರಾಯರು ಹಾಗೂ ಮಾಲಿಮರಿಯಪ್ಪರವರ ಸಮೇತ ಕಾಂಗ್ರೆಸ್ ನಾಯಕರನ್ನೆಲ್ಲ ಪೊಲೀಸರು ಬಂಧಿಸಿದರು. ನಾಯಕರ ಬಂಧನದಿಂದ ಕ್ರೋಧಗೊಂಡ ಜನತೆ ಪೋಲಿಸರ ವಿರುದ್ಧ ಪ್ರತಿಭಟನೆ ಆರಂಭಿಸಿದರು. ಪರಿಸ್ಥಿತಿ ವಿಕೋಪಕ್ಕೆ ತಿರುಗುತ್ತಿರುವುದನ್ನು ಅರಿತ ಪೊಲೀಸರು ಸತ್ಯಾಗ್ರಹಿಗಳನ್ನೂ ಒಳಗೊಂಡಂತೆ ಜಾತ್ರೆಗೆ ಬಂದಿದ್ದ ಭಕ್ತ ಜನ ಸಮೂಹಕ್ಕೆ ಕೂಡಲೇ ಆ ಜಾಗ ಖಾಲಿ ಮಾಡಿ ಹಿಂತಿರುಗುವಂತೆ ಆದೇಶಿಸಿದರು. ಬೇಸಿಗೆಯ ಬಿಸಿಲಿನ ತಾಪಕ್ಕೆ ಅಲ್ಲಿದ್ದ ಮರಗಳ ನೆರಳಲ್ಲಿ ದಣಿವಾರಿಸಿಕೊಳ್ಳುತ್ತಿದ್ದ ಹೆಂಗಸರು, ಮಕ್ಕಳು ಮತ್ತು ವೃದ್ಧರು ಬಿಸಿಲು ಕಡಿಮೆ ಆದ ಮೇಲೆ ಜಾಗ ಖಾಲಿ ಮಾಡುವುದಾಗಿ ದೈನ್ಯದಿಂದ ಕೇಳಿಕೊಂಡರು. ಆದರೆ ಇದನ್ನು ಸಹಿಸದ ಮೇಲಧಿಕಾರಿಗಳು ಲಾಠಿಪ್ರಹಾರಕ್ಕೆ ಪೊಲೀಸರಿಗೆ ಆದೇಶಿಸಿದರಲ್ಲದೆ ಅಂತಿಮವಾಗಿ ಗೋಲೀಬಾರ್‌ಗೂ ಆಜ್ಞೆ ಮಾಡಿದರು. ಅವರ ಆದೇಶದಂತೆ



ಪೊಲೀಸರು ಯಾವುದೇ ಮುನ್ಸೂಚನೆ ನೀಡದೆ ಏಕಾಏಕಿ ಜಾತ್ರೆಯಲ್ಲಿ ನೆರೆದಿದ್ದ ಜನರ ಮೇಲೆ ಗುಂಡಿನ ಧಾಳಿ ನಡೆಸಿದರು. 'ಕರ್ನಾಟಕದ ಜಲಿಯನ್‌ವಾಲಾಭಾಗ್' ಎಂಬ ಹೆಸರಿನಿಂದಲೇ ಖ್ಯಾತವಾಗಿರುವ ಈ ದುರಂತದಲ್ಲಿ ನಿಶಸ್ತ್ರರೂ, ನಿರಪರಾಧಿಗಳೂ ಆದ ೩೨ ಮಂದಿ ಅಮಾಯಕ ಜನಸಮಾನ್ಯರು ಪೊಲೀಸರ ಗುಂಡಿಗೆ ಬಲಿಯಾಗಿ ಹುತಾತ್ಮರಾದರೆ, ನೂರಾರು ಜನ ತೀವ್ರವಾಗಿ ಗಾಯಗೊಂಡರು.ಈ ದೌರ್ಜನ್ಯವನ್ನು ಖಂಡಿಸಿ ಸಂಸ್ಥಾನದ ಇತರ ಭಾಗಗಳಂತೆಯೇ ತುಮಕೂರು ಜಿಲ್ಲೆಯಲ್ಲೂ ತೀವ್ರ ಪ್ರತಿಭಟನೆಗಳು ನಡೆದವು. ತುಮಕೂರು, ಕೊರಟಗೆರೆ, ತಾವರೆಕೆರೆ, ಪಾವಗಡ, ಶಿರಾ, ಮಧುಗಿರಿ, ಕುಣಿಗಲ್, ತಿಪಟೂರು, ತುರುವೇಕೆರೆ, ಹೊನ್ನವಳ್ಳಿ, ಕರಡಿ, ಮಾಯಸಂದ್ರ ಸೇರಿದಂತೆ ಜಿಲ್ಲಾದ್ಯಂತ ಪ್ರತಿಭಟನಾ ಮೆರವಣಿಗೆಗಳು ನಡೆದವಲ್ಲದೆ ಈ ಮಹಾದುರಂತರದಲ್ಲಿ ಮಡಿದವರಿಗೆ ಸಂತಾಪ ಸೂಚಕ ಸಭೆಗಳು ಕೂಡ ನಡೆದವು. ತುಮಕೂರಿನ ಪತ್ರಿಕೋದ್ಯಮಿಯಾದ ಆರ್. ಎಸ್. ಆರಾಧ್ಯರು ವಿದುರಾಶ್ವತ್ಥಕ್ಕೆ ಭೇಟಿ ನೀಡಿ ಸ್ಥಳ ಪರಿಶೀಲನೆ ನಡೆಸಿ, ಮಾಹಿತಿ ಸಂಗ್ರಹಿಸಿ ವಿದುರಾಶ್ವತ್ಥ ಹತ್ಯಾಕಾಂಡಕ್ಕೆ ಸರ್ಕಾರವೇ ಕಾರಣ ಎಂದು ಸವಿವರವಾದ ಲೇಖನವನ್ನು ಜನವಾಣಿ ಪತ್ರಿಕೆಯಲ್ಲಿ ಪ್ರಕಟಿಸಿದರು.

❑

# ತಾವರೆಕೆರೆಯಲ್ಲಿ ನಡೆದ ಚಿರಸ್ಮರಣೀಯ ಅರಣ್ಯ ಸತ್ಯಾಗ್ರಹ

ತಾವರೆಕೆರೆ ಶಿರಾ ತಾಲ್ಲೂಕಿನಲ್ಲಿರುವ ಒಂದು ಐತಿಹಾಸಿಕ ಗ್ರಾಮ, ಶಿರಾ ಹಿರಿಯೂರು ರಸ್ತೆಯಲ್ಲಿ ಶಿರಾದಿಂದ ೧೨ ಕಿ.ಮೀ. ದೂರದಲ್ಲಿರುವ ಈ ಊರಿನ ಬಳಿ ಇರುವ ಕೆರೆಯಲ್ಲಿ ತಾವರೆ ಹೂವುಗಳು ಅಪಾರವಾಗಿ ಬೆಳೆಯುತ್ತಿದ್ದುದರಿಂದ ಈ ಊರಿಗೆ ತಾವರೆಕೆರೆ ಎಂಬ ಹೆಸರು ಬಂದಿತೆಂದು ನಂಬಲಾಗಿದೆ. ಆದರೆ ಬುಕ್ಕಾಪಟ್ಟಣದ ಶಾಸನದಲ್ಲಿ ಈ ಊರನ್ನು ತುರುಗೆರೆ ಎಂದು ಸಂಬೋಧಿಸಲಾಗಿದೆ. ಈಗ ಸುಮಾರು ೮೦೦ ಮನೆಗಳನ್ನು ಹೊಂದಿರುವ ಈ ಗ್ರಾಮ ೨೦೧೧ ರ ಜನಗಣತಿ ಪ್ರಕಾರ ೩೭೧೭ ಜನಸಂಖ್ಯೆ ಹೊಂದಿದ್ದು, ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಅಂದರೆ ೧೯೪೨ ರಲ್ಲಿ ಮೈಸೂರು ಸಂಸ್ಥಾನದಲ್ಲಿ ನಡೆದ ವಿಶಿಷ್ಟ ಅರಣ್ಯ ಸತ್ಯಾಗ್ರಹದಿಂದ ಐತಿಹಾಸಿಕ ಮಹತ್ವ ಪಡೆದಿದೆ.

ವಿದುರಾಶ್ವತ್ಥ ದುರಂತದ ನಂತರ ಮೈಸೂರು ಸಂಸ್ಥಾನದ ರಾಜಕೀಯ ಪರಿಸ್ಥಿತಿಯಲ್ಲಿ ಅನೇಕ ಬದಲಾವಣೆಗಳು ಕಂಡುಬಂದವು. ಬಹುಮುಖ್ಯವಾಗಿ ಮೈಸೂರು ಸರ್ಕಾರ ಮತ್ತು ಮೈಸೂರು ಕಾಂಗ್ರೆಸ್ ನಡುವಿನ ವೈಷಮ್ಯ ತೀವ್ರವಾಗತೊಡಗಿತು. ಇದನ್ನು ಗಮನಿಸಿದ ಮಹಾತ್ಮ ಗಾಂಧೀಜಿ ತಮ್ಮ ಪ್ರತಿನಿಧಿಗಳಾಗಿ ಸರ್ದಾರ್ ವಲ್ಲಭ ಭಾಯಿ ಪಟೇಲ್ ಮತ್ತು ಆಚಾರ್ಯ ಕೃಪಲಾನಿಯವರನ್ನು ಮೈಸೂರು ಸಂಸ್ಥಾನದ ದಿವಾನರಾದ ಮಿರ್ಜಾ ಇಸ್ಮಾಯಿಲ್ ರವರೊಂದಿಗೆ ಮಾತುಕತೆ ನಡೆಸಲು ಕಳುಹಿಸಿದರು. ಅದರಂತೆ ೧೭–೦೫–೧೯೩೮ ರಂದು ಪಟೇಲ್–ಮಿರ್ಜಾ ನಡುವೆ ಮಾತುಕತೆ ನಡೆದು ಒಪ್ಪಂದವೊಂದಕ್ಕೆ ಇಬ್ಬರೂ ಸಹಿ ಹಾಕಿದರು. ಆದರೆ ನಂತರದ ದಿನಗಳಲ್ಲಿ ದಿವಾನ್ ಮಿರ್ಜಾ ಇಸ್ಮಾಯಿಲ್ ಒಪ್ಪಂದದ ಅಂಶಗಳಿಗೆ ಬದ್ಧರಾಗದೇ ಹೋದುದರಿಂದ ಸರ್ಕಾರದ ವಿರುದ್ಧ ಸಂಸ್ಥಾನದಾದ್ಯಂತ ಮತ್ತೆ ಪ್ರತಿಭಟನಾ ಮೆರವಣಿಗೆಗಳು, ಪ್ರತಿಭಟನಾ ಸಭೆಗಳು ಆರಂಭವಾಗಿ ಜನತೆ ಸರ್ಕಾರದ ಈ ದ್ವಿಮುಖ ನೀತಿಯನ್ನು ಉಗ್ರವಾಗಿ ಖಂಡಿಸಲಾರಂಭಿಸಿದರು, ಅಲ್ಲದೇ ಪ್ರಜಾಪ್ರತಿನಿಧಿ ಸಭೆ ಮತ್ತು ನ್ಯಾಯವಿಧಾಯಕ ಸಭೆಗಳಲ್ಲೂ ಕಾಂಗ್ರೆಸ್ ಸದಸ್ಯರು ಇಂತಹ ಗೂಂಡಾ ಸರ್ಕಾರದಲ್ಲಿ ಯಾವುದೇ ಪದವಿ ಅಥವಾ ಅಧಿಕಾರಗಳು ಬೇಡವೆಂದು ತಿರಸ್ಕರಿಸಿ ತಮ್ಮ ಪದವಿಗಳಿಗೆ ರಾಜೀನಾಮೆ ನೀಡಿದರು. ಈ ಬೆಳವಣಿಗೆಗಳಿಂದ ಸಂಸ್ಥಾನದಲ್ಲಿ ಜವಾಬ್ದಾರಿ ಸರ್ಕಾರಕ್ಕಾಗಿ ನಡೆಯುತ್ತಿದ್ದ ಹೋರಾಟ ಮತ್ತಷ್ಟು ತೀವ್ರ ಸ್ವರೂಪ ಪಡೆಯಿತು. ಜನತೆಯ ಚಳುವಳಿಯನ್ನು ಹತ್ತಿಕ್ಕಲು ನಿರ್ಧರಿಸಿದ ಸರ್ಕಾರ ಸಂಸ್ಥಾನದಾದ್ಯಂತ ನಿಷೇಧಾಜ್ಞೆಗಳನ್ನು ಜಾರಿಗೊಳಿಸಿತು. ಸರ್ಕಾರದ ದಮನಕಾರಿ ನೀತಿಯನ್ನು ಖಂಡಿಸಿದ ಮೈಸೂರು ಕಾಂಗ್ರೆಸ್ ಮೈಸೂರು ಸರ್ಕಾರದ ಆಡಳಿತದ ಅಸಮರ್ಥತೆಯನ್ನು ಜನತೆಯ ಗಮನಕ್ಕೆ ತಂದು ಜನರನ್ನು ಸರ್ಕಾರದ ವಿರುದ್ಧ ಸಿಡಿದೇಳುವಂತೆ ಪ್ರೇರೇಪಿಸುವ ಪ್ರಯತ್ನಗಳನ್ನು ಆರಂಭಿಸಿತು.

ಈ ದಿಸೆಯಲ್ಲಿ ಜನಹಿತಕ್ಕೆ ಪೂರಕವಾದ ಪಾನನಿಷೇಧವನ್ನು ಜಾರಿಗೆ ತರುವಲ್ಲಿ ಮೈಸೂರು ಸರ್ಕಾರ ವಿಫಲವಾದದ್ದನ್ನು ವಿರೋಧಿಸಿ ತುಮಕೂರು ಜಿಲ್ಲೆಯಲ್ಲಿ ನಡೆದ ಮತ್ತೊಂದು ವಿಶೇಷ ಚಳುವಳಿಯೇ 'ಅರಣ್ಯ ಸತ್ಯಾಗ್ರಹ'. ಪಾನನಿರೋಧವನ್ನು ಯಶಸ್ವಿಗೊಳಿಸಬೇಕಾದರೆ ಹೆಂಡವೇ ಉತ್ಪಾದನೆ ಯಾಗದಂತೆ ತಡೆಯುವುದೇ ಸೂಕ್ತ ಮಾರ್ಗವೆಂದು ನಿರ್ಧರಿಸಿದ ಕಾಂಗ್ರೆಸ್ ನಾಯಕರು ಅದಕ್ಕಾಗಿ ವಿಶೇಷವಾದ ಚಳುವಳಿಯೊಂದನ್ನು ಆರಂಭಸಿದರು, ಇದು ಮೈಸೂರು ಸಂಸ್ಥಾನದ ಸ್ವಾತಂತ್ರ್ಯ ಹೋರಾಟದ ಇತಿಹಾಸದಲ್ಲಿ ಅತ್ಯಂತ ಮಹತ್ವದ ಚಳುವಳಿಯಾದ ಹಾಗೂ ತುಮಕೂರು, ಚಿತ್ರದುರ್ಗ, ಹಾಸನ ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ವಿಶೇಷವಾಗಿ ನಡೆದ 'ಅರಣ್ಯ ಸತ್ಯಾಗ್ರಹ' ವಾಗಿದ್ದು, ಇದು ೧೯೪೨ ರ ಸೆಪ್ಟೆಂಬರ್ ೨೮ ರಂದು ಜಿಲ್ಲೆಯ ಪ್ರಬಲ ಕಾಂಗ್ರೆಸ್ ನಾಯಕರಲ್ಲೊಬ್ಬರಾದ ಮಾಲಿಮರಿಯಪ್ಪನವರ ನೇತೃತ್ವದಲ್ಲಿ ಶಿರಾ ತಾಲ್ಲೂಕಿನ ತಾವರೆಕೆರೆಯಿಂದ ಆರಂಭವಾಯಿತು. ಈ ಚಳುವಳಿಯ ಸಂದರ್ಭದಲ್ಲಿ "ಹೆಂಡದ ಮೂಲ ಈಚಲು ಮರಗಳ ಬೇರಿನಲಿದೆ" ಎಂಬ ಸತ್ಯವನ್ನು ಅರಿತ ಕಾಂಗ್ರೆಸ್ ನಾಯಕರು ಕುಡಿತದ ಮೂಲವನ್ನೇ ನಾಶಪಡಿಸುವ ನಿರ್ಧಾರದಿಂದ ಕಾಂಗ್ರೆಸ್ ಕಾರ್ಯಕರ್ತರು ಮತ್ತು ಯುವಕರೊಂದಿಗೆ ಈಚಲು ವನಗಳಿಗೆ

ನುಗ್ಗಿ ಹಗಲು ರಾತ್ರಿಯೆನ್ನದೆ ಈಚಲು ಮರಗಳನ್ನು ಬುಡ ಸಮೇತ ಕಡಿದುರುಳಿಸುವ ಮೂಲಕ ಹೆಂಡವೇ ಉತ್ಪಾದನೆಯಾಗದಂತೆ ತಡೆಯುವ ಪ್ರಯತ್ನ ಮಾಡಿದರು.

ಸರ್ಕಾರಿ ಭೂಮಿಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಈಚಲು ಮರಗಳಿದ್ದ ಚಿತ್ರದುರ್ಗ ಜಿಲ್ಲೆಯ ತುರುವನೂರಿನಲ್ಲಿ ೧೯೩೯ರ ಸೆಪ್ಟೆಂಬರ್ ೧೩ ರಂದು ಎಸ್.ನಿಜಲಿಂಗಪ್ಪನವರ ನೇತೃತ್ವದಲ್ಲಿ ಆರಂಭವಾಗಿ ಮೂಡಲಗಿರಿಗೌಡ, ಎಂ. ಎಸ್. ಚಂದ್ರಪ್ಪ, ವಾಸುದೇವರಾವ್, ಪಿ. ಎಸ್. ಶ್ರೀನಿವಾಸ್, ಬಳ್ಳಾರಿಸಿದ್ದಮ್ಮ, ರಾಜಶೇಖರ ಹಿರೇಮಠ ಮುಂತಾದವರ ನಾಯಕತ್ವದಲ್ಲಿ ಚಿತ್ರದುರ್ಗ ಜಿಲ್ಲೆಯ ಕಸ್ತೂರಿ ರಂಗಪ್ಪನಹಳ್ಳಿ ಹಿರಿಯೂರು, ದೊಡ್ಡಸಿದ್ಧವನ ಹಳ್ಳಿ, ಮರಡೀಹಳ್ಳಿಗಳಿಗೆ ವಿಸ್ತರಿಸಿ ನಂತರ ತುಮಕೂರು ಜಿಲ್ಲೆ ಪ್ರವೇಶಿಸಿದ ಈ ಚಳುವಳಿಗೆ ಮೊದಲ ಹಂತದಲ್ಲಿ ಅಪಾರ ಸಂಖ್ಯೆಯಲ್ಲಿ ಈಚಲು ಮರಗಳಿದ್ದ ಶಿರಾ ತಾಲ್ಲೂಕನ್ನು ಆಯ್ಕೆ ಮಾಡಿಕೊಳ್ಳಲಾಯಿತು. ಚಳುವಳಿ ಆರಂಭಕ್ಕೆ ಮುಂಚೆ ಈ ಮೊದಲೇ ಚಳುವಳಿ ನಡೆಯುತ್ತಿದ್ದ ಚಿತ್ರದುರ್ಗ ಜಿಲ್ಲೆಗೆ ತೆರಳಿ ಅರಣ್ಯ ಸತ್ಯಾಗ್ರಹದ ರೀತಿ ಮತ್ತು ಏರ್ಪಾಡುಗಳ ವಿಷಯವನ್ನು ಸಂಗ್ರಹಿಸಿಕೊಂಡು ಬರಲು ಶಿರಾ ತಾಲ್ಲೂಕಿನ ಲಕ್ಷ್ಮಿಸಾಗರದ ಭೀಮಣ್ಣನವರನ್ನು ಕಳುಹಿಸಿಕೊಡಲಾಯಿತು. ಅವರು ತಂದ ಮಾಹಿತಿಯ ಆಧಾರದ ಮೇಲೆ ಶಿರಾ ತಾಲ್ಲೂಕಿನ ತಾವರೆಕೆರೆ, ವಡ್ಡನಹಳ್ಳಿ ಮತ್ತು ಯಲಿಯೂರುಗಳಲ್ಲಿ ಸತ್ಯಾಗ್ರಹ ಶಿಬಿರಗಳನ್ನು ಆರಂಭಿಸಿ, ಜಿಲ್ಲೆಯ ಎಲ್ಲ ಭಾಗಗಳಿಂದ ಚಳುವಳಿಗಾರವನ್ನು ಸಂಘಟಿಸಿ, ಕರೆತಂದು ಅಲ್ಲಿ ಅವರಿಗೆ ತರಭೇತಿ ನೀಡಲಾಯಿತು. ಮಾಲೀಮರಿಯಪ್ಪನವರನ್ನು ಈ ಚಳುವಳಿಯ ಪ್ರಥಮ ಸರ್ವಾಧಿಕಾರಿ ಎಂದು ಘೋಷಿಸಲಾಯಿತು. ನಂತರ ಚಳುವಳಿಗಾರರನ್ನು ಮೂರು ತಂಡಗಳಾಗಿ ವಿಂಗಡಿಸಿ, ಮೊದಲ ತಂಡಕ್ಕೆ ಕೊಡಲಿ ಹಿಡಿದು ಕಾಡಿಗೆ ಹೋಗಿ ಈಚಲುಮರ ಕಡಿಯುವ ಮೂಲಕ ಚಳುವಳಿ ನಡೆಸುವ ಜವಾಬ್ದಾರಿಯನ್ನೂ, ಎರಡನೆಯ ತಂಡಕ್ಕೆ ಮೊದಲ ತಂಡದ ಚಳುವಳಿಗಾರರಿಗೆ ಅಗತ್ಯವಾದ ಸಲಕರಣೆಗಳನ್ನು ಒದಗಿಸುವ ಜವಾಬ್ದಾರಿಯನ್ನೂ, ಹಾಗೂ ಮೂರನೆಯ ತಂಡಕ್ಕೆ ಮೊದಲೆರಡು ತಂಡಗಳ ಚಳುವಳಿಗಾರರಿಗೆ ಆಹಾರ ಸಾಮಗ್ರಿಗಳನ್ನು ತಲುಪಿಸುವ ಜವಾಬ್ದಾರಿಯನ್ನು ವಹಿಸಲಾಯಿತು.

ಈ ಎಲ್ಲಾ ಸಿದ್ಧತೆಗಳೂ ಮುಗಿದ ನಂತರ ೧೯೩೯ರ ಸೆಪ್ಟೆಂಬರ್ ೨೮ ರಂದು ಮಾಲಿ ಮರಿಯಪ್ಪನವರ ನೇತೃತ್ವದಲ್ಲಿ ಹೆಚ್. ಆರ್. ದಾಸೇಗೌಡ, ಬಿ.ಕೆಂಚಣ್ಣ, ಗಿರಿಯಣ್ಣ ಮತ್ತು ಮಠದ ಬಸವಯ್ಯನವರನ್ನು ಒಳಗೊಂಡ ಮೊದಲ ತಂಡ ಹೆಗಲ ಮೇಲೆ ಕೊಡಲಿ ಹೊತ್ತು ತಾವರೆಕೆರೆ ಬಳಿಯ ಅರಣ್ಯಕ್ಕೆ ನುಗ್ಗಿ ಈಚಲು ಮರಗಳನ್ನು ಕಡಿದುರುಳಿಸುವುದರೊಂದಿಗೆ ಅರಣ್ಯ ಸತ್ಯಾಗ್ರಹ ಅಧಿಕೃತವಾಗಿ ಆರಂಭವಾಯಿತು.



ಈ ಸಂಧರ್ಭದಲ್ಲಿ ಅಸ್ತಮಾ ಖಾಯಿಲೆಯಿಂದ ನರಳುತ್ತಿದ್ದರೂ ಎದೆಗುಂದದೆ ಮುಂದೆ ನಿಂತು ಗೆಳೆಯ ಗಿರಿಯಪ್ಪನ ಸಹಕಾರದೊಂದಿಗೆ ಊಟೋಪಾಚರವೂ ಸೇರಿದಂತೆ ಶಿಬಿರಕ್ಕೆ ಅಗತ್ಯವಾದ ಎಲ್ಲ ವ್ಯವಸ್ಥೆಗಳನ್ನೂ ನಾಯಕ ಟಿ.ತಾರೇಗೌಡರು ಮಾಡಿಕೊಟ್ಟರೆ ಚಳುವಳಿಯ ಪ್ರಥಮ ಸರ್ವಾಧಿಕಾರಿ ಎಂದು ಘೋಷಿಸಲ್ಪಟ್ಟ ಮಾಲಿ ಮರಿಯಪ್ಪನವರು ಚಳುವಳಿಯ ನೇತೃತ್ವವಹಿಸಿ ಚಳುವಳಿಗಾರರೊಂದಿಗೆ ತಾವೇ ಸ್ವತಃ ಕಾಡಿಗೆ ಹೋಗಿ ಮರ ಕಡಿದರು. ಇವರನ್ನು ಅನುಸರಿಸಿ ಹೆಚ್. ಆರ್. ದಾಸೇಗೌಡ, ಬಿ. ಕೆಂಚಪ್ಪ, ಗಿರಿಯಣ್ಣ ಮತ್ತು ತಾವರೆಕೆರೆ ಬಸವಯ್ಯನವರೇ ಅಲ್ಲದೇ ಚಿಕ್ಕಬೈರಪ್ಪ, ಬಾಲಯ್ಯ, ಸಂಜೀವಪ್ಪ, ಕುಣಿಗಲ್‌ನ ಕೆ. ವಿ. ಕೃಷ್ಣಸ್ವಾಮಿ, ಸಂಪಿಗೆಯ ರಾಮಸ್ವಾಮಿ ಅಯ್ಯಂಗಾರ್, ಮೊಸರುಕುಂಟೆಯ ರಾಮಕೃಷ್ಣಪ್ಪ, ತುಮಕೂರಿನ ಟಿ. ಎಲ್. ಸಂಗಣ್ಣ, ತಾವರೆಕೆರೆಯ ಗೋವಿಂದಪ್ಪ, ದ್ವಾರಾಳಿನ ಹನುಮಂತಪ್ಪ, ಕಳ್ಳಂಬೆಳ್ಳದ ರಾಮೇಗೌಡ ಹುಣಸೇಹಳ್ಳಿಯ ಗೋವಿಂದಪ್ಪ, ಕ್ಯಾತ್ಸಂದ್ರದ ಕುಂಡಲಗಿರಿ ಶ್ರೀನಿವಾಸಾಚಾರ್, ಗುಬ್ಬಿಯ ಪುಟ್ಟರೇವಣ್ಣ, ಮೂರ್ಕಣ್ಣಪ್ಪ, ಮಲ್ಲಯ್ಯ ತುಮಕೂರಿನ ವಿಠೋಬರಾವ್, ಎಂ. ನೀಲಕಂಠರಾವ್, ಡಿ. ಆರ್. ಮುದ್ದಪ್ಪ, ಚಿಕ್ಕದಾಳವಟ್ಟದ ನರಸೇಗೌಡ, ಬೇವಿನಹಳ್ಳಿಯ ಕರೇಗೌಡ ಮತ್ತು ಹುಣಸೇಹಳ್ಳಿಯ ನರಸೇಗೌಡ ಸೇರಿದಂತೆ ನೂರಾರು ಜನ ಸತ್ಯಾಗ್ರಹಿಗಳು ನಾಯಕರನ್ನು ಅನುಸರಿಸಿ ತಾವರೆಕೆರೆ ಕಾಡಿಗೆ ನುಗ್ಗಿ ಈಚಲು ಮರಗಳನ್ನು ಕಡಿದುರುಳಿಸುವುದರೊಂದಿಗೆ ತುಮಕೂರು ಜಿಲ್ಲೆಯಲ್ಲಿ ಅರಣ್ಯ ಸತ್ಯಾಗ್ರಹ ತೀವ್ರಗೊಂಡಿತು.

ಇದೇ ಸಂದರ್ಭದಲ್ಲಿ ಬಿ. ಸಿ. ನಂಜುಂಡಯ್ಯನವರ ನೇತೃತ್ವದ ಮತ್ತೊಂದು ತಂಡ ವಡ್ಡನಹಳ್ಳಿ ಅರಣ್ಯಕ್ಕೂ ಬಿ. ಎನ್. ರಾಮೇಗೌಡ ಮತ್ತು ಸಿ.ಜೆ.ಮುಕ್ಕಣ್ಣಪ್ಪನವರ ನೇತೃತ್ವದ ಇನ್ನೊಂದು ತಂಡ ಇಡೀ ತುಮಕೂರು ಜಿಲ್ಲೆಯಲ್ಲಿ ಅತಿ ಹೆಚ್ಚು ಅಂದರೆ ೪೩೭ ಎಕರೆ ವಿಸ್ತೀರ್ಣದ ಸೇಂದಿ ವನವನ್ನು ಹೊಂದಿದ್ದ ಯಲಿಯೂರು ಅರಣ್ಯಕ್ಕೂ ನುಗ್ಗಿ ಈಚಲು ಮರಗಳನ್ನು

ಕಡಿಯುವುದರೊಂದಿಗೆ ತಾವರೆಕೆರೆಯ ಹೋರಾಟಗಾರರಿಗೆ ಸ್ಫೂರ್ತಿ ನೀಡಿದರು. ಯಲಿಯೂರು ಗ್ರಾಮದ ರೈತರಂತೂ ಗ್ರಾಮದ ರೈತನಾಯಕರಾದ ವೈ.ಬಿ.ವೀರಭದ್ರಯ್ಯ ಮತ್ತು ಎಸ್. ಮಲ್ಲಯ್ಯನವರ ನೇತೃತ್ವದಲ್ಲಿ ಉತ್ಸಾಹದಿಂದ ಚಳುವಳಿಯಲ್ಲಿ ಪಾಲ್ಗೊಂಡರು. ಪ್ರತಿ ಮನೆಯಿಂದಲೂ ಕನಿಷ್ಠ ಒಬ್ಬ ಸದಸ್ಯನನ್ನು ಚಳುವಳಿಗೆ ಕಳುಹಿಸಲು ತೀರ್ಮಾನಿಸುವುದರೊಂದಿಗೆ ಇಡೀ ಗ್ರಾಮ ಉತ್ಸಾಹದಿಂದ ಈ ಚಳುವಳಿಯಲ್ಲಿ ಭಾಗಿಯಾಯಿತು. ಚಳುವಳಿಯ ಸಂದರ್ಭದಲ್ಲಿ ಈ ಒಂದೇ ಗ್ರಾಮದಿಂದ ಹನುಮಂತಯ್ಯ, ಉಗ್ರಪ್ಪ, ತಿಮ್ಮಯ್ಯ, ನಾಗಣ್ಣ, ವೈ. ಕರಿಯಣ್ಣ, ಚಿಕ್ಕಸಿದ್ಧಯ್ಯ, ಈರಣ್ಣ ಸೇರಿದಂತೆ ಒಟ್ಟು ೩೦ ಮಂದಿ ಬಂಧನಕ್ಕೊಳಗಾದರು. ಇದು ಇಡೀ ಸಂಸ್ಥಾನದಲ್ಲಿ ಒಂದು ಗ್ರಾಮದಲ್ಲಿ ಬಂಧನಕ್ಕೊಳಗಾದ ಅತಿ ದೊಡ್ಡ ಸಂಖ್ಯೆಯಾಗಿದ್ದು, ಇಷ್ಟು ಸಂಖ್ಯೆಯ ಬಂಧನಗಳು ಏಕಕಾಲಕ್ಕೆ ಸಂಸ್ಥಾನದ ಯಾವ ಗ್ರಾಮದಲ್ಲೂ ನಡೆಯಲಿಲ್ಲ.

ಚಳುವಳಿ ತೀವ್ರಗೊಂಡುದರಿಂದ ಕ್ರೋಧಗೊಂಡ ಸರ್ಕಾರ ೧೯೩೯ರ ಸೆಪ್ಟೆಂಬರ್ ೩೦ ರಂದು ಚಳುವಳಿಯಲ್ಲಿ ಪಾಲ್ಗೊಂಡಿದ್ದ, ಮಾಲಿಮರಿಯಪ್ಪ ಟಿ.ತಾರೇಗೌಡ, ಹೆಚ್. ಆರ್. ದಾಸೇಗೌಡ, ಬಿ. ಕೆಂಚಣ್ಣ, ಬಿ. ಎನ್. ರಾಮೇಗೌಡ, ಎಂ.ನೀಲಕಂಠರಾವ್, ಎ.ಗುಂಡುರಾವ್, ಸಿ. ಜೆ. ಮೂರ್ಕಣ್ಣಪ್ಪ, ಬಿ. ಸಿ. ನಂಜುಂಡಯ್ಯ, ವಿಠೋಬರಾವ್ ಸೇರಿದಂತೆ ನಾಯಕರನ್ನೆಲ್ಲಾ ಬಂಧಿಸಿತು. ಆದರೂ ಚಳುವಳಿಯೇನೂ ನಿಲ್ಲಲಿಲ್ಲ. ನಾಯಕರ ಬಂಧನದಿಂದ ಮತ್ತಷ್ಟು ಕ್ರೋಧಗೊಂಡ ಚಳುವಳಿಗಾರರು ತಾವರೆಕೆರೆಯಲ್ಲಿ ಚಿಕ್ಕ – ಚಿಕ್ಕ ತಂಡಗಳನ್ನು ಮಾಡಿಕೊಂಡು ಮರ ಕಡಿಯುವ ಮೂಲಕ ಚಳುವಳಿಯನ್ನು ತೀವ್ರಗೊಳಿಸಿದರು. ಸರ್ಕಾರವೂ ತನ್ನ ದಮನ ಕಾರ್ಯವನ್ನು ಮುಂದುವರೆಸಿ ಅಕ್ಟೋಬರ್ ೫ ರಂದು ತಾವರೆಕೆರೆಯಲ್ಲಿ ೮ ಮಂದಿ, ಯಲಿಯೂರಿನಲ್ಲಿ ೫ ಮತ್ತು ವಡ್ಡನಹಳ್ಳಿಯಲ್ಲಿ ೪ ಮಂದಿ ಸೇರಿ ಒಟ್ಟು ೧೭ ಮಂದಿ ಚಳುವಳಿಗಾರರನ್ನು ಬಂಧಿಸಿತಲ್ಲದೆ, ಅಕ್ಟೋಬರ್ ೬ ರಂದು ತಾವರೆಕೆರೆಯಲ್ಲಿ ೬, ಯಲಿಯೂರಿನಲ್ಲಿ ೪ ಮತ್ತು ವಡ್ಡನಹಳ್ಳಿಯಲ್ಲಿ ೪ ಮಂದಿ ಸೇರಿ ಒಟ್ಟು ೧೪ ಮಂದಿಯನ್ನು ಬಂಧಿಸಿತು. ಮತ್ತೆ ಸೆಪ್ಟೆಂಬರ್ ೭ ರಂದು ತಾವರೆಕೆರೆಯಲ್ಲಿ ೪ ಮಂದಿ ಯಲಿಯೂರಿನಲ್ಲಿ ೪ ಸೇರಿ ೮ ಮಂದಿ ಬಂಧನಕ್ಕೊಳಗಾದರು. ಅರಣ್ಯ ಸತ್ಯಾಗ್ರಹದಲ್ಲಿ ಭಾಗವಹಿಸಿ ಈಚಲು ಮರ ಕಡಿಯುವ ಮೂಲಕ ಮೈಸೂರು ಸಾರ್ವಜನಿಕ ರಕ್ಷಣ ಕಾಯ್ದೆಯನ್ನು ಉಲ್ಲಂಘಿಸಿದುದಕ್ಕಾಗಿ ಬಂಧಿತರಾದ ಈ



ಎಲ್ಲ ಹೋರಾಟಗಾರರನ್ನೂ ಶಿರಾದ ಪುರಭವನದ ಆವರಣಕ್ಕೆ ಪೊಲೀಸರು ಕರೆ ತಂದಾಗ, ತಾಲ್ಲೂಕಿನ ಎಲ್ಲಾ ಕಡೆಗಳಿಂದ ಕೊಡಲಿ ಮತ್ತು ತಾವೇ ಕಡಿದಿದ್ದ ಈಚಲು ಮರದ ತುಂಡುಗಳನ್ನು ಎತ್ತಿನ ಗಾಡಿಗಳಲ್ಲಿ ತುಂಬಿಕೊಂಡು ಶಿರಾಕ್ಕೆ ಬಂದಿದ್ದ ಸುಮಾರು ೧೦ ಸಾವಿರ ಸಾರ್ವಜನಿಕರು ಈ ಸತ್ಯಾಗ್ರಹಿಗಳಿಗೆ ಹೂವಿನ ಹಾರ ಹಾಕಿ, ಕೊಂಬು, ಕಹಳೆ, ವಾದ್ಯಗಳ ಮೂಲಕ ಜಯಕಾರ ಮಾಡುತ್ತಾ ವೈಭವದಿಂದ ಸ್ವಾಗತಿಸಿದರು. ನಂತರ ಹೋರಾಟಗಾರರನ್ನು ಮಧುಗಿರಿಯ ನ್ಯಾಯಾಲಯದ ಮುಂದೆ ಹಾಜರುಪಡಿಸಲಾಯಿತು. ವಿಚಾರಣೆ ನಡೆಸಿದ ನ್ಯಾಯಾಧೀಶರು ಎಲ್ಲರಿಗೂ ೬ ತಿಂಗಳ ಕಠಿಣ ಸೆರೆವಾಸ ಹಾಗೂ ೧೫೦ ರೂಪಾಯಿ ಜುಲ್ಮಾನೆ ತೆರುವ ಶಿಕ್ಷೆ ನೀಡಿ ಬೆಂಗಳೂರಿನ ಕೇಂದ್ರ ಕಾರಾಗ್ರಹಕ್ಕೆ ಕಳುಹಿಸಿದರು. ನಾಯಕರೆಲ್ಲರ ಬಂಧನದಿಂದ ಚಳುವಳಿಗೆ ಸ್ವಲ್ಪಕಾಲ ತಡೆಯುಂಟಾಯಿತಾದರೂ ಹೋರಾಟವೇನೂ ನಿಲ್ಲಲಿಲ್ಲ. ಸತ್ಯಾಗ್ರಹ ಶಿಬಿರಗಳಲ್ಲಿದ್ದ ಉಳಿದ ಚಳುವಳಿಗಾರರು ಸಣ್ಣ ಸಣ್ಣ ತಂಡಗಳಾಗಿ ಅರಣ್ಯಕ್ಕೆ ನುಗ್ಗಿ ಈಚಲು ಮರಗಳನ್ನು ಕಡಿಯುವ ಮೂಲಕ ಚಳುವಳಿಯನ್ನು ಜೀವಂತವಾಗಿರಿಸಿಕೊಂಡರು. ನಂತರ ಈ ಚಳುವಳಿಯ ಪ್ರಭಾವ ತುಮಕೂರು ಜಿಲ್ಲೆಯ ಎಲ್ಲಾ ತಾಲ್ಲೂಕುಗಳಿಗೂ ವಿಸ್ತರಿಸಿ ಜಿಲ್ಲೆಯ ಎಲ್ಲ ಕಡೆಗಳಿಂದ ಕೆಲ ಸತ್ಯಾಗ್ರಹಿಗಳು ತಾವರೆಕೆರೆಯ ಚಳುವಳಿ ಕೇಂದ್ರಕ್ಕೆ ಬರಲಾರಂಭಿಸಿದರಲ್ಲದೆ ಉಳಿದವರು ಕೂಡ ಸ್ಥಳೀಯ ನಾಯಕರ ನೇತೃತ್ವದಲ್ಲಿ ತಾವಿರುವ ಸ್ಥಳ ಅಥವಾ ಅಕ್ಕಪಕ್ಕದ ಪ್ರದೇಶಗಳಲ್ಲಿರುವ ಈಚಲು ವನಗಳಿಗೆ ನುಗ್ಗಿ ಈಚಲು ಮರಗಳನ್ನು ಕಡಿಯುವ ಮೂಲಕ ಜಿಲ್ಲೆಯ ಎಲ್ಲ ಕಡೆ ಚಳುವಳಿಯನ್ನು ವಿಸ್ತರಿಸಿದರು.

ಹೀಗೆ ತಾವರೆಕೆರೆಯಲ್ಲಿ ಆರಂಭವಾದ ಅರಣ್ಯ ಸತ್ಯಾಗ್ರಹ ಬಹು ಬೇಗ ಕುಣಿಗಲ್, ಪಾವಗಡ, ಚಿಕ್ಕನಾಯಕನಹಳ್ಳಿ, ಅಕ್ಕಿರಾಂಪುರ, ಕರಡಿ, ಹೊನ್ನವಳ್ಳಿ, ಸೇರಿದಂತೆ ಜಿಲ್ಲಾದ್ಯಂತ ವಿಸ್ತರಿಸಿ, ಈಚಲು ಮರಗಳು ನಾಶವಾಗಿ, ಹೆಂಡದ ಉತ್ಪಾದನೆ ಸಂಪೂರ್ಣ ನಿಂತುಹೋಗಿ ಸರ್ಕಾರಕ್ಕೆ ಈ ಬಾಬ್ತಿನಿಂದ ಬರುತ್ತಿದ್ದ ಆದಾಯದಲ್ಲಿ ತೀವ್ರ ಕುಸಿತವುಂಟಾದಾಗ ಹೇಗಾದರೂ ಮಾಡಿ ಈ ಚಳುವಳಿಯನ್ನು ಹತ್ತಿಕ್ಕಲೇ ಬೇಕೆಂದು ನಿರ್ಧರಿಸಿದ ಸರ್ಕಾರ ಚಳವಳಿಗಾರರ ಮೇಲೆ ಲಾಠಿ ಚಾರ್ಜ್ ಮಾಡಿಸಿ, ಮನಬಂದಂತೆ ಹಿಂಸಿಸಿತಲ್ಲದೆ ನೂರಾರು ಚಳುವಳಿಗಾರರನ್ನು ಬಂಧಿಸಿ, ಸೆರೆಮನೆಗೆ ತಳ್ಳಿತು. ಅಪಾರ ಸಂಖ್ಯೆಯ

ಬಂಧನಗಳಿಂದ ಸೆರೆಮನೆಗಳಲ್ಲೂ ಜಾಗ ಸಾಲದಂತಾದಾಗ ಬಂಧಿತ ಚಳವಳಿಗಾರರನ್ನು ಇಡಲು ಬಯಲು ಬಂಧೀಖಾನೆಗಳನ್ನು ನಿರ್ಮಿಸಿತು. ಅವುಗಳೂ ಸಾಲದಾದಾಗ ಅನೇಕ ಚಳುವಳಿಗಾರರನ್ನು ರಾತ್ರಿ ವೇಳೆ ಲಾರಿಗಳಲ್ಲಿ ತುಂಬಿಕೊಂಡು ಹೋಗಿ ಕ್ರೂರ ಮೃಗಗಳಿಂದ ಕೂಡಿದ ಹುಳಿಯಾರು ಸಮೀಪದ ಕುದುರೆ ಕಣಿವೆ ಹಾಗೂ ಬುಕ್ಕಾಪಟ್ಟಣದ ಅಭೇದ್ಯ ಕಾಡುಗಳಲ್ಲಿ ಬಿಟ್ಟು ಬರಲಾಯಿತು. ಕ್ರೂರ ಪ್ರಾಣಿಗಳು ಮತ್ತು ವಿಷ ಜಂತುಗಳ ನೆಲೆಯಾದ ಈ ದಟ್ಟ ಕಾಡಿನ ಮಧ್ಯದಲ್ಲಿರುವ ಕುದುರೆ ಕಣಿವೆಯಿಂದ ನಿರಾಯುಧರು ಜೀವ ಸಹಿತ ಹಿಂದಿರುಗಿದರೆ ಅವರಿಗೆ ಮತ್ತೊಂದು ಜನ್ಮ ಸಿಕ್ಕಿದಂತೆಯೇ ಸರಿ. ಹೀಗೆ ಸತ್ಯಾಗ್ರಹಿಗಳನ್ನು ಬಂಧಿಸಿದ ಪೊಲೀಸರು ಕುದುರೆ ಕಣಿವೆ ಮತ್ತು ಬುಕ್ಕಾಪಟ್ಟಣದ ಕಾಡುಗಳಲ್ಲಿ ಬಿಟ್ಟು ಬಂದಿದ್ದಾರೆ. ಅವರು ಮತ್ತೆ ಊರಿಗೆ ಹಿಂತಿರುಗದಂತೆ ಮಾಡಿದ್ದಾರೆ ಎಂಬ ಸುದ್ದಿ ಕಾಡ್ಗಿಚ್ಚಿನಂತೆ ತಾವರೆಕೆರೆ ಮತ್ತು ಸುತ್ತಮುತ್ತಲ ಹಳ್ಳಿಗಳಲ್ಲಿ ಹರಡಿತು. ಇದರಿಂದ ಉದ್ವಿಗ್ನರಾದ ಆ ಎಲ್ಲಾ ಹಳ್ಳಿಗಳ ಜನ ಪೊಲೀಸರ ವಿರುದ್ಧ ಕ್ರೋಧಗೊಂಡು ಶಿರಾದತ್ತ ಓಡಿದರು. ಇದರಿಂದ ಮುಂದೆ ಆಗಬಹುದಾದ ಅಪಾಯವನ್ನು ಅರಿತ ಬಿ. ಎನ್. ರಾಮೇಗೌಡರು ಮತ್ತು ಎಂ. ಆರ್. ರಾಜಪ್ಪನವರು ತಮ್ಮ ಸ್ನೇಹಿತರೊಡನೆ ಕೂಡಲೇ ಶಿರಾಕ್ಕೆ ಧಾವಿಸಿ ಹೋಗಿ ಕ್ರೋಧಗೊಂಡಿದ್ದ ಜನರಿಗೆ ಸಮಾಧಾನ ಹೇಳಿ ತಾವೇ ಚಳುವಳಿಗಾರರನ್ನು ಹುಡುಕಿಕೊಂಡು ಬರುವುದಾಗಿ ಹುಳಿಯಾರು ಮತ್ತು ಬುಕ್ಕಾಪಟ್ಟಣದ ಕಾಡುಗಳತ್ತ ತೆರಳಿದರು. ಅದೃಷ್ಟವಶಾತ್ ಇವರು ಹುಳಿಯಾರಿಗೆ ಹೋಗುವ ಮುನ್ನವೇ ಬಂಧಿತರ ಭೇಟಿಯಾಯಿತು. ಸುದ್ದಿ ತಿಳಿದ ಹುಳಿಯಾರಿನ ಸುತ್ತಮುತ್ತಲ ಜನ ಕಾಡಿಗೆ ಹೋಗಿ ಅವರೆಲ್ಲರನ್ನೂ ಈ ವೇಳೆಗಾಗಲೇ ರಕ್ಷಿಸಿ ಕರೆತಂದಿದ್ದರೂ, ತಮ್ಮ ಜೊತೆಯ ಹೋರಾಟಗಾರರನ್ನು ಕಂಡ ತಕ್ಷಣ ಶಿರಾದ ಕಡೆ ಹೋಗುತ್ತಿದ್ದ ಬಸ್ಸೊಂದನ್ನು ನಿಲ್ಲಿಸಿ ಪೊಲೀಸರು ಕಾಡಿಗೆ ಬಿಟ್ಟು ಬಂದಿದ್ದ ಚಳುವಳಿಗಾರರೆಲ್ಲರೂ ಕ್ಷೇಮವಾಗಿರುವರೆಂದು ಸುದ್ದಿ ಕಳುಹಿಸಿ ಈ ನಾಯಕರು ನಂತರ ಹಿಂದಿನ ರಾತ್ರಿಯಿಂದ ನಿದ್ರೆ ಮತ್ತು ಆಹಾರಗಳಿಲ್ಲದೆ ಕತ್ತಲಲ್ಲೇ ಕಾಡಿನಲೆಲ್ಲಾ ಅಲೆದು ಬಳಲಿದ್ದ ಸತ್ಯಾಗ್ರಹಿಗಳಿಗೆ ಆಹಾರ ಕೊಡಿಸಿ ಕೆಲ ಕಾಲ ವಿಶ್ರಾಂತಿ ನೀಡಿ ಸಂಜೆಯ ವೇಳೆಗೆ ಶಿರಾಕ್ಕೆ ಕರೆದುಕೊಂಡು ಬಂದರು. ಅವರೆಲ್ಲಾ ಕ್ಷೇಮವಾಗಿ ಬಂದು ಬಸ್ಸಿನಲ್ಲಿ ಇಳಿದಿದ್ದರು.



ಕಂಡ ಹಳ್ಳಿಗಳ ಜನತೆ ಕತ್ತಲ್ಲನ್ನೂ ಲೆಕ್ಕಿಸದೆ ಆಗಲೇ ಅವರೆಲ್ಲರನ್ನೂ ಕರೆದುಕೊಂಡು ಶಿರಾಪಟ್ಟಣದ ತುಂಬಾ ವಿಜೃಂಭಣೆಯಿಂದ ಮೆರವಣಿಗೆ ನಡೆಸಿದರು.

ತುಮಕೂರಿನ ಪೊಲೀಸ್ ಸೂಪರಿಂಟೆಂಡೆಂಟ್ ಭಾಷಾರೆಡ್ಡಿ, ಜಿಲ್ಲಾಧಿಕಾರಿ ಕೆ.ಗುರುದತ್‌ಗೆ ೧೯೩೯ರ ಡಿಸೆಂಬರ್ ೯ ರಂದು ಬರೆದ ಒಂದು ಅಧಿಕೃತ ಪತ್ರದ ಪ್ರಕಾರ ೧೯೩೯ರ ಸೆಪ್ಟೆಂಬರ್ ೨೮ ರಿಂದ ನವೆಂಬರ್ ೨೨ರವರೆಗೆ ತಾವರೆಕೆರೆಯನ್ನು ಪ್ರಧಾನ ಕೇಂದ್ರವಾಗಿ ಮಾಡಿಕೊಂಡು ಸುಮಾರು ೨ ತಿಂಗಳ ಕಾಲ ನಡೆದ ಈ ಸುದೀರ್ಘ ಚಳುವಳಿಯಲ್ಲಿ ಒಟ್ಟು ೩೪೦ ಮಂದಿ ಬಂಧಿಸಲ್ಪಟ್ಟು ಅವರಲ್ಲಿ ೫೦ ಮಂದಿಯನ್ನು ಪೊಲೀಸ್ ಠಾಣೆಯಲ್ಲಿ ಎಚ್ಚರಿಸಿ ಬಿಡಲಾಯಿತೆಂದೂ, ಉಳಿದ ೨೯೦ ಮಂದಿಯಲ್ಲಿ ೯ ಮಂದಿ ನ್ಯಾಯಾಲಯ ದಿಂದ ಬಿಡುಗಡೆಯಾದರೆ ೨೮೧ ಮಂದಿಗೆ ಕಠಿಣ ಶಿಕ್ಷೆಯಾಯಿತೆಂದೂ ವರದಿ ನೀಡಿದರಾದರೂ ಇದು ಸತ್ಯಕ್ಕೆ ದೂರವಾದುದು. ವಾಸ್ತವವಾಗಿ ಈ ಅವಧಿಯಲ್ಲಿ ೧೨೩೮ ಮಂದಿ ಬಂಧಿಸಲ್ಪಟ್ಟಿದ್ದರೆಂದು ತಿಳಿದುಬರುತ್ತದೆ. ಇದೇ ಅವಧಿಯಲ್ಲಿ ಸಂಸ್ಥಾನದ ಇತರ ಭಾಗಗಳಲ್ಲಿ ನಡೆದ ಚಳುವಳಿಗಳಲ್ಲಿ ಭಾಗವಹಿಸಿದವರಲ್ಲಿ ಶಿವಮೊಗ್ಗದಲ್ಲಿ ಕೇವಲ ೪ ಮಂದಿ, ಬೆಂಗಳೂರು ಜಿಲ್ಲೆಯಲ್ಲಿ ೮ ಮಂದಿ, ಹಾಸನದಲ್ಲಿ ೧೮ ಮತ್ತು ಚಿತ್ರದುರ್ಗದಲ್ಲಿ ೨೪ ಮಂದಿ ಬಂಧಿತರಾಗಿದ್ದು ಇದನ್ನು ಗಮನಿಸಿದರೆ ಅರಣ್ಯ ಸತ್ಯಾಗ್ರಹದಲ್ಲಿ ತುಮಕೂರು ಜಿಲ್ಲೆಯಲ್ಲಿ ಅದರಲ್ಲೂ ತಾವರೆಕೆರೆ ಸತ್ಯಾಗ್ರಹ ಕೇಂದ್ರದಲ್ಲಿ ಆದಷ್ಟು ಬಂಧನಗಳು ಸಂಸ್ಥಾನದ ಬೇರೆಲ್ಲೂ ಆಗಲಿಲ್ಲ. ಹೀಗೆ ಬಂಧಿತರಾದ ಅವರೆಲ್ಲರನ್ನೂ ಬೆಂಗಳೂರಿನ ಕೇಂದ್ರ ಕಾರಾಗೃಹ ಹಾಗೂ ಭೈರಮಂಗಲದ ಬಯಲು ಬಂಧಿಖಾನೆಗಳಲ್ಲಿ ಇಡಲಾಗಿದ್ದು ಭೈರಮಂಗಲದ ಹೊಸಕೆರೆಯ ನಿರ್ಮಾಣ ಕಾರ್ಯ ಕೂಡ ಬಹುತೇಕ ಇವರಿಂದಲೇ ನಡೆಯಿತು. ಈ ಸತ್ಯಾಗ್ರಹವನ್ನು ಹತ್ತಿಕ್ಕಲು ತುಮಕೂರು ಜಿಲ್ಲಾಧಿಕಾರಿ ಕೆ.ಗುರುದತ್ ಪೊಲೀಸರ ಮೂಲಕ ಚಳುವಳಿಗಾರರಿಗೆ ಹಿಂಸೆ ಕೊಡತೊಡಗಿದಾಗ ಕೆರಳಿದ ಸ್ವಾತಂತ್ರ್ಯ ಹೋರಾಟಗಾರರ ಆರ್. ಎಸ್. ಆರಾಧ್ಯರು ತಾವು ನಡೆಸುತ್ತಿದ್ದ ಒಂದು ಭೂಗತ ಪತ್ರಿಕೆಯಲ್ಲಿ 'ಗುರುದತ್ ಕಾ ದರ್ಬಾರ್' ಎಂಬ ವಿಶೇಷಾಂಕವನ್ನೇ ಮುದ್ರಿಸಿ ಅದರಲ್ಲಿ "ಸರ್ ಮಿರ್ಜಾ ಎಂಬ ಸಾಗರದಲ್ಲಿ ಗುರುದತ್ ಎಂಬ ಕಪ್ಪೆಯೊಂದು ವಾಸ ಮಾಡುತ್ತಾ ಸತ್ಯಾಗ್ರಹಿಗಳ ಮೇಲೆ ಸ್ವೇಚ್ಛಾಧಿಕಾರ ಚಲಾಯಿಸುತ್ತಿದೆ ಎಂದು ಉಪಮೆಗಳ ಮೂಲಕ ಜಿಲ್ಲಾಧಿಕಾರಿ ಮತ್ತು

ಸರ್ಕಾರವನ್ನು ಟೀಕಿಸಿದಾಗ ಕ್ರೋಧಗೊಂಡ ಸರ್ಕಾರ ಅವರನ್ನು ಕೂಡ ಬಂಧಿಸಿ ಸೆರೆಮನೆವಾಸ ಶಿಕ್ಷೆ ವಿಧಿಸಿತು.

ಹೀಗೆ ೧೯೩೮ರ ಸೆಪ್ಟೆಂಬರ್ ೨೮ ರಂದು ತಾವರೆಕೆರೆಯಲ್ಲಿ ಆರಂಭವಾದ ಅರಣ್ಯ ಸತ್ಯಾಗ್ರಹ ನವೆಂಬರ್ ೨೨ ರವರೆಗೆ ಅವ್ಯಾಹತವಾಗಿ ನಡೆಯುವ ಮೂಲಕ ನಂತರ ನಡೆದ ಕ್ವಿಟ್ ಇಂಡಿಯಾ ಚಳುವಳಿ ಮತ್ತು ಮೈಸೂರು ಚಲೋ ಚಳುವಳಿಗಳಿಗೆ ಮಾರ್ಗದರ್ಶಕವಾಗುವುದರೊಂದಿಗೆ ಭಾರತದ ಸ್ವಾತಂತ್ರ್ಯ ಹಾಗೂ ಮೈಸೂರು ಸಂಸ್ಥಾನದಲ್ಲಿ ಜವಾಬ್ದಾರಿ ಸರ್ಕಾರಗಳ ರಚನೆಗೆ ತನ್ನದೇ ಆದ ಅತ್ಯಮೂಲ್ಯ ಕೊಡುಗೆ ನೀಡಿತು.

ಕ್ವಿಟ್ ಇಂಡಿಯಾ ಚಳುವಳಿಯ ಸಂಧರ್ಭದಲ್ಲಿ ೧೯೪೨ರ ಸೆಪ್ಟೆಂಬರ್ ೫ ರಂದು ತಮ್ಮ ನಾಯಕರಾದ ಮಾಲಿಮರಿಯಪ್ಪ ಮತ್ತು ಕೆ.ಹೆಂಜೆರಪ್ಪನವರ ಬಂಧನವನ್ನು ವಿರೋಧಿಸಿ ಶಿರಾ ಮತ್ತು ತಾವರೆಕೆರೆಗಳಲ್ಲಿ ಪ್ರತಿಭಟನಾ ಮೆರವಣಿಗೆಗಳು ನಡೆದವಲ್ಲದೆ ಸೆಪ್ಟೆಂಬರ್ ೯ ರಂದು ತಾವರೆಕೆರೆಯಲ್ಲಿ ಮಧ್ಯದ ಅಂಗಡಿ ಮುಂದೆ ಪಿಕೆಟಿಂಗ್ ಕೂಡ ನಡೆಸಲಾಯಿತು. ಸ್ವಾತಂತ್ರ್ಯಾನಂತರ ನಡೆದ ಮೈಸೂರು ಚಲೋ ಚಳುವಳಿಯ ಸಂಧರ್ಭದಲ್ಲಿ ತಾವರೆಕೆರೆ ಬಹುಮುಖ್ಯ ಪಾತ್ರವಹಿಸಿತು, ೧೯೪೭ರ ಸೆಪ್ಟೆಂಬರ್ ೧ ರಂದು ಜವಾಬ್ದಾರಿ ಸರ್ಕಾರದ ರಚನೆಗಾಗಿ ಚಳುವಳಿಯ ಮೊದಲ ಸರ್ವಾಧಿಕಾರಿ ಕೆ.ಸಿ.ರೆಡ್ಡಿಯವರು ನೀಡಿದ ಕರೆಯಂತೆ ಚಳುವಳಿಯ ಸಿದ್ದತೆಗಾಗಿ ಮಧುಗಿರಿಯಲ್ಲಿ ಕರೆದಿದ್ದ ಸಭೆಯಲ್ಲಿ ಮಾತನಾಡುತ್ತಾ ಮಾಲಿ ಮರಿಯಪ್ಪನವರು “ಬಂಧುಗಳೇ ಸ್ವಾತಂತ್ರ್ಯ ನಮ್ಮ ಕೈ ಹಿಡಿಯಲು ನಮ್ಮ ಮನೆ ಬಾಗಿಲಿಗೆ ಬಂದು ನಿಂತಿದೆ. ನಾವೆಲ್ಲರೂ ಅದನ್ನು ಎದುರುಗೊಳ್ಳಬೇಕು ಆದರೆ ದಿವಾನರು ಅದಕ್ಕೆ ಅಡ್ಡಿಯಾಗಿದ್ದಾರೆ. ಇದು ನಮ್ಮ ಕೊನೆಯ ಹೋರಾಟ ಎದ್ದೇಳಿ, ಪ್ರತಿಭಟಿಸಿ, ಭಾರತ ಮಾತೆಯ ಶೌರ್ಯ ಪ್ರದರ್ಶಿಸಿ, ಕಾರ್ಮಿಕ ಬಂಧುಗಳೇ ಕೆಲಸ ನಿಲ್ಲಿಸಿ ಈ ಕೊನೆಯ ಹೋರಾಟದಲ್ಲಿ ಪಾಲ್ಗೊಳ್ಳಿ, ವಿದ್ಯಾರ್ಥಿಗಳೇ ಶಾಲಾ, ಕಾಲೇಜುಗಳನ್ನು ತ್ಯಜಿಸಿ ಹೊರಬನ್ನಿ, ನಮ್ಮನ್ನು ನಾವೇ ಪ್ರತಿನಿಧಿಸುವ ಸರ್ಕಾರ ಬರದಿದ್ದರೆ ನಾವೆಲ್ಲರೂ ಜೀವಂತ ಶವಗಳಿದ್ದಂತೆ ಬ್ರಿಟಿಷ್ ಭಾರತದಲ್ಲಿನ ನಮ್ಮ ಸಹೋದರರು ಸ್ವಾತಂತ್ರ್ಯದ ಪವಿತ್ರ ವಾತಾವರಣದಲ್ಲಿ ಉಸಿರಾಡುತ್ತಿರುವಾಗ ಮಾದರಿ ಮೈಸೂರಿನ ಪ್ರಜೆಗಳಾದ ನಾವು ಮಾತ್ರ ದಿವಾನರ ಅಧೀನದಲ್ಲಿ ಉಳಿಯುವುದು ಹೀನಾಯಮಾನ. ನಮ್ಮ ಜನ್ಮಸಿದ್ದ



ಹಕ್ಕಾದ ಸ್ವಾತಂತ್ರ್ಯ ದೊರಕುವವರೆಗೂ ಹೋರಾಟ ನಿಲ್ಲುವುದಿಲ್ಲ ಎದ್ದೇಳಿ” ಎಂದು ಘರ್ಜಿಸುವ ಮೂಲಕ ಹೋರಾಟಕ್ಕೆ ಜನರನ್ನು ಪ್ರೇರೆಪಿಸಿದರು. ಆದರೆ, ಅದೇ ದಿನ ಚಳುವಳಿಗೆ ಪ್ರೇರೇಪಿಸಿದ ಮಾಲಿಮರಿಯಪ್ಪ ಮತ್ತು ಕೆ.ಹೆಂಜೆರಪ್ಪನವರನ್ನು ಸರ್ಕಾರ ಬಂಧಿಸಿದುದರಿಂದ ಕ್ರೋಧಗೊಂಡ ಮಧುಗಿರಿ ಮತ್ತು ಶಿರಾ ತಾಲ್ಲೂಕುಗಳ ಜನತೆ ಸೆಪ್ಟೆಂಬರ್ ೨ ರಂದು ಉಗ್ರ ಚಳುವಳಿ ಆರಂಭಿಸಿದರು. ತಾವರೆಕೆರೆ ಒಳಗೊಂಡಂತೆ ಶಿರಾ ತಾಲ್ಲೂಕಿನ ಹಳ್ಳಿ ಹಳ್ಳಿಗಳಲ್ಲೂ ಈ ಚಳುವಳಿ ತೀವ್ರವಾಗಿ ನಡೆಯಿತು. ಬಿ.ಎನ್.ರಾಮೇಗೌಡ, ಸಿದ್ಧಪ್ಪ, ದೊಡ್ಡಮರುಳಪ್ಪ ಮುಂತಾದ ನಾಯಕರು ಹಳ್ಳಿ ಹಳ್ಳಿಗಳಿಗೆ ಬೇಟಿ ನೀಡಿ “ ಭೂಮಿ ರೈತನದು, ಮಳೆ ಕೊಡವವನು ವರುಣದೇವ ಹೀಗಿರುವಾಗ ನಾವು ಸರ್ಕಾರಕ್ಕೆ ಏಕೆ ಕಂದಾಯ ಕೊಡಬೇಕು ಎಂದು ರೈತರನ್ನು ಜಾಗೃತಿಗೊಳಿಸುವ ಮೂಲಕ ಅವರ ಸಹಕಾರದೊಂದಿಗೆ ಕರನಿರಾಕರಣಾ ಆರಂಭಿಸಿದರು. ಈ ಕರನಿರಾಕರಣಾ ಚಳುವಳಿಗೆ ತಾವರೆಕೆರೆಯಲ್ಲಿ ಉತ್ತಮ ಸ್ಪಂದನೆ ದೊರೆತುಬ್ಧ ಇಡೀ ಊರಿನ ರೈತರು ಸರ್ಕಾರಕ್ಕೆ ಕಂದಾಯ ಕೊಡಲು ನಿರಾಕರಿಸುವ ಮೂಲಕ ಚಳುವಳಿಯನ್ನು ತೀವ್ರಗೊಳಿಸಿದರಲ್ಲದೇ ಕಂದಾಯಾಧಿಕಾರಿಗಳಾದ ಪಟೇಲರು ಮತ್ತು ಶ್ಯಾನುಭೋಗರು ತಮ್ಮ ಹುದ್ದೆಗೆ ರಾಜಿನಾಮೆ ಕೊಡಬೇಕೆಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ತಮ್ಮ ಗ್ರಾಮದ ಜನತೆಯ ಮನವಿಗೆ ಸ್ಪಂದಿಸಿದ ತಾವರೆಕೆರೆಯ ಪಟೇಲರಾದ ದೊಡ್ಡರಂಗೇಗೌಡರು ಮತ್ತು ಶ್ಯಾನುಬೋಗರಾಗಿದ್ದ ಭೀಮಸೇನರಾಯರು ಸ್ವಯಿಚ್ಛೆಯಿಂದ ರಾಜೀನಾಮೆ ನೀಡಿ ಚಳುವಳಿಗೆ ಬೆಂಬಲ ನೀಡಿದರು. ಅಂತಿಮವಾಗಿ ೧೯೪೭ರ ಅಕ್ಟೋಬರ್ ೭ ರಂದು ಸಂಸ್ಥಾನದಲ್ಲಿ ಜವಾಬ್ದಾರಿ ಸರ್ಕಾರ ಸ್ಥಾಪಿಸಲು ಇಚ್ಛೆ ವ್ಯಕ್ತಪಡಿಸಿದ ಮೈಸೂರು ಮಹಾರಾಜರು ನಂತರ ನಡೆದ ಮಾತುಕತೆಗಳ ಆಧಾರದ ಮೇಲೆ ಅಕ್ಟೋಬರ್ ೧೨ ರಂದು ಮೈಸೂರಿನಲ್ಲಿ ಜವಾಬ್ದಾರಿ ಸರ್ಕಾರ ರಚಿಸಲು ಒಪ್ಪಿಗೆ ಸೂಚಿಸಿದರು. ಮಹಾರಾಜರ ಒಪ್ಪಿಗೆಯಂತೆ ಅಕ್ಟೋಬರ್ ೨೪ ವಿಜಯದಶಮಿಯಂದು ಕೆ.ಸಿ ರೆಡ್ಡಿಯವರ ನೇತೃತ್ವದಲ್ಲಿ ಮೈಸೂರು ಸಂಸ್ಥಾನದಲ್ಲಿ ಜವಾಬ್ದಾರಿ ಸರ್ಕಾರವೊಂದು ಅಸ್ತಿತ್ವಕ್ಕೆ ಬರುವುದರೊಂದಿಗೆ ೧೯೩೮ರ ಸೆಪ್ಟೆಂಬರ್ ೨೮ ರಿಂದ ನಿರಂತರವಾಗಿ ತಾವರೆಕೆರೆಯಲ್ಲಿ ನಡೆಯುತ್ತಿದ್ದ ಸ್ವಾತಂತ್ರ್ಯ ಚಳುವಳಿ ಕೊನೆಗೊಂಡು ಸ್ವತಂತ್ರ ಭಾರತದ ಇತಿಹಾಸದಲ್ಲಿ ಈ ಗ್ರಾಮ ಚಿರಸ್ಥಾಯಿಯಾಗಿ

ಉಳಿಯಿತು. ದೇಶ ತನ್ನ ಸ್ವಾತಂತ್ರದ ೭೫ನೇ ವರ್ಷಾಚರಣೆಯ ‘ ಅಮೃತ ಮಹೋತ್ಸವ’ ವನ್ನು ಆಚರಿಸಿಕೊಳ್ಳುತ್ತಿರುವ ಈ ಶುಭ ಸಂಧರ್ಭದಲ್ಲಿ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಈ ಗ್ರಾಮ ಹಾಗೂ ಈ ಗ್ರಾಮದ ನೂರಾರು ಹೋರಾಟಗಾರರನ್ನು ಅಭಿಮಾನರಿಂದ ಸ್ಮರಿಸುತ್ತಾ ಅವರಿಗೊಂದು ಗೌರವದ ನಮನವನ್ನು ಸಲ್ಲಿಸೋಣ.

❑

## ತಾವರೆಕೆರೆ ಅರಣ್ಯ ಸತ್ಯಾಗ್ರಹದಲ್ಲಿ ಭಾಗವಹಿಸಿದ ಪ್ರಮುಖ ಹೋರಾಟಗಾರರ ವ್ಯಕ್ತಿ ಚಿತ್ರಣ

**– ಮಾಲಿ ಮರಿಯಪ್ಪ**

೧೯೧೧ರಲ್ಲಿ ಶಿರಾ ಪಟ್ಟಣದ ಮಾಲಿ ಮುದ್ದಪ್ಪನವರ ಮಗನಾಗಿ ಜನಿಸಿದ ಮಾಲಿ ಮರಿಯಪ್ಪನವರು ತುಮಕೂರು ಜಿಲ್ಲೆಯ ಅಗ್ರಶ್ರೇಣಿಯ ಸ್ವಾತಂತ್ರ್ಯ ಹೋರಾಟಗಾರರು, ಶಿರಾ, ಮೈಸೂರು ಮತ್ತು ಪೂನಾಗಳಲ್ಲಿ ಶಿಕ್ಷಣ ಪಡೆದ ನಂತರ ಕೆಲಕಾಲ ನ್ಯಾಯವಾದಿಯಾಗಿ ಕಾರ್ಯ ನಿರ್ವಹಿಸಿದರಾದರೂ ನಂತರ ಮಹಾತ್ಮ ಗಾಂಧೀಜಿಯವರ ಪ್ರಭಾವಕ್ಕೆ ಒಳಗಾಗಿ ಸ್ವಾತಂತ್ರ್ಯ ಚಳುವಳಿಗೆ ಧುಮುಕಿ ಇತಿಹಾಸ ಪ್ರಸಿದ್ಧ ಶಿವಪುರ ಧ್ವಜ ಸತ್ಯಾಗ್ರಹ ಹಾಗೂ ವಿಧುರಾಶ್ವತ್ಥ ಸತ್ಯಾಗ್ರಹಗಲ್ಲಿ ಪ್ರಮುಖ ಪಾತ್ರವಹಿಸಿದರು. ಈ ಚಳುವಳಿಗಳಿಂದ ಹಿಂತಿರುಗಿದ ನಂತರ ತುಮಕೂರು ಕಾಂಗ್ರೆಸ್ ತೀರ್ಮಾನದಂತೆ ಶಿರಾ ತಾಲ್ಲೂಕಿನ ತಾವರೆಕೆರೆ, ವಡ್ಡನಹಳ್ಳಿ ಮತ್ತು ಯಲಿಯೂರುಗಳಲ್ಲಿ ಆರಂಭವಾದ ಇತಿಹಾಸ ಪ್ರಸಿದ್ಧ ಅರಣ್ಯ ಸತ್ಯಾಗ್ರಹದ ಮೊದಲ ಸರ್ವಾಧಿಕಾರಿಯಾಗಿ ಆಯ್ಕೆಗೊಂಡ ಇವರು ತಾಲ್ಲೂಕಿನ ಹಳ್ಳಿಹಳ್ಳಿ ಸುತ್ತಿ ಜನಸಂಘಟನೆ ಮಾಡಿ ಸತ್ಯಾಗ್ರಹವನ್ನು ಯಶಸ್ವಿಗೊಳಿಸಿದರು. ನಂತರ ನಡೆದ ಕ್ವಿಟ್ ಇಂಡಿಯಾ ಮತ್ತು ಮೈಸೂರು ಚಲೋ ಚಳುವಳಿಗಳಲ್ಲೂ ನಾಯಕತ್ವ ವಹಿಸಿದ ಮಾಲಿ ಮರಿಯಪ್ಪನವರು ತುಮಕೂರು, ಹಾಸನ, ಮತ್ತು ಬೆಂಗಳೂರಿನ ಸೆರೆಮನೆಗಳಲ್ಲಿ ಅನೇಕ ತಿಂಗಳುಗಳ ಕಠಿಣ ಸೆರೆವಾಸ ಶಿಕ್ಷೆಯನ್ನು ಅನುಭವಿಸಿದರು. ತಮ್ಮ ಅಪ್ರತಿಮ ಹೋರಾಟದ ಮೂಲಕ ದೇಶದ ಸ್ವಾತಂತ್ರ್ಯಕ್ಕೆ ಅತ್ಯಮೂಲ್ಯ ಕೊಡುಗೆ ನೀಡಿದ ಶ್ರೀಯುತರು ೧೯೬೮ರ ಮೇ ೨೫ ರಂದು ಹೃದಯಾಘಾತದಿಂದ ನಿಧನರಾದರು.

### ಬಿ ಸಿ ನಂಜುಡಯ್ಯ

ಬಿ. ಸಿ. ನಂಜುಂಡಯ್ಯನವರು ತುಮಕೂರು ಜಿಲ್ಲೆಯ ಮತ್ತೊಬ್ಬ ಸ್ವಾತಂತ್ರ್ಯ ಹೋರಾಟಗಾರರಾಗಿದ್ದು ಶಿರಾ ತಾಲ್ಲೂಕಿನ ತಾವರೆಕೆರೆಯಲ್ಲಿ ನಡೆದ ಅರಣ್ಯ ಸತ್ಯಾಗ್ರಹದ ಸಂದರ್ಭದಲ್ಲಿ ಸತ್ಯಾಗ್ರಹ ಶಿಬಿರಗಳಿಗೆ ಅಗತ್ಯವಾದ ಏರ್ಪಾಡುಗಳನ್ನೆಲ್ಲಾ ಮಾಡಿದರಲ್ಲದೆ. ನಂತರ ನಡೆದ ಕ್ವಿಟ್ ಇಂಡಿಯಾ ಮತ್ತು ಮೈಸೂರು ಚಲೋ ಚಳುವಳಿಗಳಲ್ಲೂ ಭಾಗವಹಿಸಿ ಸರ್ಕಾರದ ಕೆಂಗಣ್ಣಿಗೆ ಗುರಿಯಾಗುವ ಮೂಲಕ ಒಟ್ಟು ೨೦ ತಿಂಗಳ ಕಠಿಣ ಸೆರೆವಾಸ ಶಿಕ್ಷೆ ಅನುಭವಿಸಿದರು.

### ಟಿ. ತಾರೇಗೌಡ

ಶಿರಾ ತಾಲ್ಲೂಕಿನ ಸ್ವಾತಂತ್ರ್ಯ ಚಳುವಳಿಯ ಕೇಂದ್ರ ಸ್ಥಳವಾದ ತಾವರೆಕೆರೆಯಲ್ಲಿ ೧೯೦೯ರಲ್ಲಿ ಜನಿಸಿದ ಟಿ. ತಾರೇಗೌಡರು ಅನನ್ಯ ದೇಶಪ್ರೇಮಿ, ಅಪ್ರತಿಮ ಸ್ವಾತಂತ್ರ್ಯ ಹೋರಾಟಗಾರ. ೧೯೩೬ ರಲ್ಲಿ ಸ್ವಾತಂತ್ರ್ಯ ಚಳುವಳಿಗೆ ಪ್ರವೇಶಿಸಿ ೧೯೩೮ರಲ್ಲಿ ಶಿವಪುರದಲ್ಲಿ ನಡೆದ ಧ್ವಜಸತ್ಯಾಗ್ರಹದಲ್ಲಿ ಭಾಗವಹಿಸಿ ಪೋಲೀಸರಿಂದ ಬಂಧಿತರಾಗುವ ಮುಲಕ ೩ ತಿಂಗಳ ಕಠಿಣ ಸೆರೆವಾಸ ಶಿಕ್ಷೆ ಅನುಭವಿಸಿದ ಇವರು ನಂತರ ೧೯೩೯ ರಲ್ಲಿ ತಮ್ಮ ಸ್ವಗ್ರಾಮ ತಾವರೆಕೆರೆಯಲ್ಲಿ ಆರಂಭವಾದ ಅರಣ್ಯ ಸತ್ಯಾಗ್ರಹದ ಸತ್ಯಾಗ್ರಹಿಗಳ ಶಿಬಿರದ ವ್ಯವಸ್ಥೆ ಹಾಗೂ ಶಿಬಿರಾರ್ಥಿಗಳಿಗೆ ಊಟೋಪಾಚಾರದ ವ್ಯವಸ್ಥೆಯನ್ನೆಲ್ಲಾ ತಾವೇ ಮಾಡಿದರು ೧೯೪೨ ರ ಕ್ವಿಟ್ ಇಂಡಿಯಾ ಮತ್ತು ೧೯೪೭ರ ಮೈಸೂರು ಚಲೋ ಚಳುವಳಿಗಳಲ್ಲೂ ಸಕ್ರಿಯವಾಗಿ ಭಾಗವಹಿಸುವ ಮೂಲಕ ಸ್ವಾತಂತ್ರ್ಯ ಚಳುವಳಿಗೆ ಅತ್ಯಮೂಲ್ಯ ಸೇವೆ ಸಲ್ಲಿಸಿದರು.

### ಬಿ.ಎನ್. ರಾಮೇಗೌಡ

೧೯೧೫ರಲ್ಲಿ ಶಿರಾ ತಾಲ್ಲೂಕಿನ ಬರಗೂರಿನಲ್ಲಿ ಜನಿಸಿದ ಬಿ.ಎನ್ ರಾಮೇಗೌಡರು ತುಮಕೂರು ಜಿಲ್ಲೆಯ ಅಗ್ರಗಣ್ಯ ಸ್ವಾತಂತ್ರ್ಯ ಹೋರಾಟಗಾರರಲ್ಲಿ ಒಬ್ಬರಾಗಿದ್ದು. ಪಾನನಿರೋಧ ಚಳುವಳಿಯ ಸಂದರ್ಭದಲ್ಲಿ ಅಬಕಾರಿ ಗುತ್ತಿಗೆದಾರರಾಗಿದ್ದ ತಮ್ಮ ತಂದೆ ಪಟೇಲ್ ನರಸಿಂಹೇಗೌಡರ ವಿರುದ್ಧವೇ ಬಂಡಾಯ ಸಾರಿದ ದೇಶ ಪ್ರೇಮಿ, ೧೯೩೯ರಲ್ಲಿ ಶಿರಾ ತಾಲ್ಲೂಕಿನ ತಾವರೆಕೆರೆ ಸೇರಿದಂತೆ ಮೂರು ಕೇಂದ್ರಗಳಲ್ಲಿ ಅರಣ್ಯ ಸತ್ಯಾಗ್ರಹ ಆರಂಭವಾದಾಗ ಚಳುವಳಿಗೆ ಯುವಕರನ್ನು ಸಂಘಟಿಸಿದುದರ ಜೊತೆಗೆ ತಾಲ್ಲೂಕಿನಾದ್ಯಂತ ಸಂಚರಿಸಿ ಸತ್ಯಾಗ್ರಹ ಶಿಬಿರಗಳಿಗೆ ಅಗತ್ಯವಾದ ದವಸ, ಧಾನ್ಯ, ಹಣ ಹಾಗೂ ಸಲಕರಣೆಗಳನ್ನು ಸಂಗ್ರಹಿಸಿ ಸತ್ಯಾಗ್ರಹಿಗಳಿಗೆ ನೀಡುವ ಮೂಲಕ ಚಳುವಳಿಯ ಯಶಸ್ಸಿಗೆ ಕಾರಣರಾದರು. ನಂತರ ನಡೆದ ಕ್ವಿಟ್ಇಂಡಿಯಾ ಮತ್ತು ಮೈಸೂರು ಚಲೋ ಚಳುವಳಿಗಳಲ್ಲೂ ಪಾಲ್ಗೊಂಡು ಸೆರೆವಾಸ ಶಿಕ್ಷೆ ಅನುಭವಿಸಿದ ಶ್ರೀಯುತರು ೧೯೮೧ರಲ್ಲಿ ನಿಧನರಾದರು.



### ಎಂ.ಎಸ್. ಹನುಮಂತರಾವ್

ಸ್ವಾತಂತ್ರ್ಯ ಹೋರಾಟಗಾರ ಎಂ.ಎಸ್. ಹನುಮಂತರಾಯರು ೧೯೨೦ರಲ್ಲಿ ಚಿಕ್ಕನಾಯಕನಹಳ್ಳಿಯಲ್ಲಿ ಜನಿಸಿದರು. ೧೯೩೪ರಲ್ಲಿ ತುಮಕೂರಿಗೆ ಬಂದಿದ್ದ ಮಹಾತ್ಮ ಗಾಂಧೀಜಿಯವರಿಂದ ಪ್ರೇರೇಪಿತರಾಗಿ ಸ್ವಾತಂತ್ರ್ಯ ಚಳುವಳಿಗೆ ಧುಮುಕಿದ ಇವರು ೧೯೩೮ರಲ್ಲಿ ವಿಧುರಾಶ್ವತ್ಥದಲ್ಲಿ ನಡೆದ ಕಾಂಗ್ರೆಸ್ ಅಧಿವೇಶನಕ್ಕೆ ಸ್ವಯಂ ಸೇವಕರಾಗಿ ಹೋಗಿದ್ದರು. ೧೯೩೯ರಲ್ಲಿ ಅರಣ್ಯ ಸತ್ಯಾಗ್ರಹ ಆರಂಭವಾದಾಗ ಗೆಳೆಯರೊಡನೆ ತಾವರೆಕೆರೆಗೆ ಹೋಗಿ ಈಚಲು ಮರ ಕಡಿದ ಇವರು ಪೊಲೀಸರಿಂದ ಬಂಧಿತರಾಗಿ ಶಿರಾದ ಸೆರೆಮನೆ ಸೇರಿದರು. ನಂತರ ಪೊಲೀಸರು ರಾತ್ರೋ ರಾತ್ರಿ ಇವರನ್ನು ಲಾರಿಯಲ್ಲಿ ಕರೆದುಕೊಂಡು ಹೋಗಿ ಹುಳಿಯಾರಿನ ದಟ್ಟ ಅರಣ್ಯವಾದ ಕುದುರೆ ಕಣಿವೆಯಲ್ಲಿ ಬಿಟ್ಟು ಬಂದರು. ಅದೃಷ್ಟವಶಾತ್ ವಿಷಯ ತಿಳಿದ ಬಿ.ಎನ್ ರಾಮೇಗೌಡರು ಮತ್ತು ಅವರ ಗೆಳೆಯರು ಕೂಡಲೇ ಹೋಗಿ ರಕ್ಷಿಸಿ ಕರೆದುಕೊಂಡು ಬಂದಿದ್ದರಿಂದ ಇವರ ಪ್ರಾಣ ಉಳಿಯಿತು.

### ಕರಿಬಸಪ್ಪ

ತಾವರೆಕೆರೆ ಅರಣ್ಯ ಸತ್ಯಾಗ್ರಹದಲ್ಲಿ ಭಾಗವಹಿಸಿದ ಮತ್ತೊಬ್ಬ ಹೋರಾಟಗಾರರೆಂದರೆ ಮಾಗೋಡಿನ ಕರಿಬಸಪ್ಪ ಶಿರಾದಲ್ಲಿ ಚಿಕ್ಕ ಕಬ್ಬಿಣದ ಅಂಗಡಿಯನ್ನು ಇಟ್ಟು ಕೊಂಡಿದ್ದ. ಇವರು ೧೯೩೯ರ ತಾವರೆಕೆರೆಯ ಅರಣ್ಯ ಸತ್ಯಾಗ್ರಹದಲ್ಲಿ ಭಾಗವಹಿಸಿದರಲ್ಲದೆ ತಮ್ಮ ಕಬ್ಬಿಣದ ಅಂಗಡಿಯಿಂದ ಅರಣ್ಯದಲ್ಲಿ ಮರಗಳನ್ನು ಕಡಿಯಲು ಸತ್ಯಾಗ್ರಹಿಗಳಿಗೆ ಅಗತ್ಯವಾದ ಸಲಕರಣೆಗಳನ್ನು

ಒದಗಿಸುವಾಗ ಪೊಲೀಸರಿಂದ ಬಂಧಿತರಾಗಿ ಸೆರೆಮನೆಯ ಶಿಕ್ಷೆ ಅನುಭವಿಸಿದರು

## ಎಸ್.ಆರ್. ವೀರಶೆಟ್ಟಪ್ಪ

ಶ್ರೀಯುತ ಎಸ್.ಆರ್ ವೀರಶೆಟ್ಟಪ್ಪನವರು ಕೊರಟಗೆರೆ ತಾಲ್ಲೂಕಿನ ಸೋಂಪುರದವರು. ಹಿರಿಯ ನಾಯಕರ ಭಾಷಣಗಳಿಂದ ಪ್ರಭಾವಿತರಾಗಿ ಸ್ವಾತಂತ್ರ್ಯ ಚಳುವಳಿ ಪ್ರವೇಶಿಸಿದ ಇವರು ತಾವರೆಕೆರೆ ಅರಣ್ಯ ಸತ್ಯಾಗ್ರಹದ ಸಂದರ್ಭದಲ್ಲಿ ಆರ್.ಎಸ್. ಆರಾಧ್ಯರು ಪ್ರಕಟಿಸುತ್ತಿದ್ದ ಸೈಕ್ಲೊ ಸ್ಟೈಲ್ಡ್ ಪತ್ರಿಕೆಗಳನ್ನು ಗುಪ್ತವಾಗಿ ಹಳ್ಳಿ ಹಳ್ಳಿಗಳಲ್ಲಿ ಹಂಚಿ ಜನಜಾಗೃತಿ ಮೂಡಿಸಿದರು. ಹಾಗೂ ಇದಕ್ಕಾಗಿ ಏಳು ತಿಂಗಳ ಸೆರೆವಾಸವನ್ನೂ ಅನುಭವಿಸಿದರು.

## ನೀಲಕಂಠಾಪುರ ರಾಮರೆಡ್ಡಿ

ಕೊರಟಗೆರೆ ತಾಲ್ಲೂಕಿನ ಕಂಬದಹಳ್ಳಿಯ ರೈತಯುವಕ ನೀಲಕಂಠಾಪುರ ರಾಮರೆಡ್ಡಿಯವರು ೧೯೩೯ರಲ್ಲಿ ತಾವರೆಕೆರೆಯಲ್ಲಿ ನಡೆದ ಅರಣ್ಯ ಸತ್ಯಾಗ್ರಹದಲ್ಲಿ ಭಾಗವಹಿಸಿದ ಓರ್ವ ಸ್ವಾತಂತ್ರ್ಯ ಹೋರಾಟಗಾರರಾಗಿದ್ದರು.

## ಮುದ್ದರಾಮಯ್ಯ

ಕೊರಟಗೆರೆ ತಾಲ್ಲೂಕಿನ ವಡ್ಡರಗೆರೆಯ ಮುದ್ದರಾಮಯ್ಯ ಮತ್ತೊಬ್ಬ ಸ್ವಾತಂತ್ರ್ಯ ಹೋರಾಟಗಾರರಾಗಿದ್ದು ತಾವರೆಕೆರೆಯ ಅರಣ್ಯ ಸತ್ಯಾಗ್ರಹದಲ್ಲಿ ಭಾಗವಹಿಸುವ ಮೂಲಕ ಮೈಸೂರು ಸೆರೆಮನೆಯಲ್ಲಿ ೯ ತಿಂಗಳ ಕಠಿಣ ಸೆರೆವಾಸ ಅನುಭವಿಸಿದರು.

## ಮೂರ್ಕಣ್ಣಪ್ಪ

ಶ್ರೀಯುತರು ಶಿರಾ ತಾಲ್ಲೂಕಿನ ಕಳ್ಳಂಬೆಳ್ಳದ ಹೆಂಜೇರಪ್ಪನವರ ಮಗನಾಗಿದ್ದು ತುಮಕೂರು ಜಿಲ್ಲೆಯಲ್ಲಿ ನಡೆದ ಸ್ವಾತಂತ್ರ್ಯ ಚಳುವಳಿಯ ಇತಿಹಾಸದಲ್ಲಿ ಅತ್ಯಂತ ಸ್ಮರಣೀಯ ಸತ್ಯಾಗ್ರಹವಾದ ತಾವರೆಕೆರೆಯ ಅರಣ್ಯ ಸತ್ಯಾಗ್ರಹದಲ್ಲಿ ಭಾಗವಹಿಸಿ ೬ ತಿಂಗಳ ಕಠಿಣ ಸೆರೆವಾಸದ ಶಿಕ್ಷೆ ಅನುಭವಿಸಿದರಲ್ಲದೆ ನ್ಯಾಯಾಲಯ ವಿಧಿಸಿದ ೫೦ ರೂಪಾಯಿ ಜುಲ್ಮಾನೆ ಹಣವನ್ನು ಪಾವತಿಸಲು ತಿರಸ್ಕರಿಸುವ ಮೂಲಕ ಒಂದು ತಿಂಗಳ ಹೆಚ್ಚುವರಿ ಕಠಿಣ ಶಿಕ್ಷೆಯನ್ನು ಅನುಭವಿಸಿದರು.

## ತಾವರೆಕೆರೆ ಗೋವಿಂದಪ್ಪ

ತಾವರೆಕೆರೆ ಗೋವಿಂದಪ್ಪನವರು ತಮ್ಮ ಸ್ವಗ್ರಾಮ ತಾವರೆಕೆರೆಯಲ್ಲಿ ೧೯೩೯ ರಲ್ಲಿ ನಡೆದ ಅರಣ್ಯ ಸತ್ಯಾಗ್ರಹದಲ್ಲಿ ಕೆ ಹೆಂಜೇರಪ್ಪನವರ ನಾಯಕತ್ವದಲ್ಲಿ ಭಾಗವಹಿಸಿ, ಅರಣ್ಯದಲ್ಲಿ ಮರಗಳನ್ನು ಕಡಿಯುವ ಮೂಲಕ ಪೊಲೀಸರಿಂದ ಬಂಧನಕ್ಕೊಳಗಾಗಿ ೫ ತಿಂಗಳ ಕಠಿಣ ಶಿಕ್ಷೆಯನ್ನೂ ಹಾಗೂ ನ್ಯಾಯಾಲಯ ವಿಧಿಸಿದ್ದ ಜುಲ್ಮಾನೆಯ ಹಣ ೧೦೦ ರೂಪಾಯಿಗಳನ್ನು ಕೊಡಲು ತಿರಸ್ಕರಿಸಿದುದಕ್ಕಾಗಿ ಒಂದೂವರೆ ತಿಂಗಳ ಹೆಚ್ಚುವರಿ ಶಿಕ್ಷೆ ಸೇರಿ ಒಟ್ಟು ಆರೂವರೆ ತಿಂಗಳ ಕಠಿಣ ಸೆರೆವಾಸ ಅನುಭವಿಸಿದರು.

## ರಾಮ ನಾಯ್ಕ

ಶಿರಾ ತಾಲ್ಲೂಕಿನ ದೊಡ್ಡಅಗ್ರಹಾರದ ವೀರಜುಂಜು ನಾಯಕರ ಮಗ ರಾಮನಾಯ್ಕ ಅರಣ್ಯ ಸತ್ಯಾಗ್ರಹದಲ್ಲಿ ಪಾಲ್ಗೊಂಡಿದ್ದ ಮತ್ತೊಬ್ಬ ಸ್ವಾತಂತ್ರ್ಯ ಹೋರಾಟಗಾರನಾಗಿದ್ದು. ಚಳುವಳಿಯಲ್ಲಿ ಭಾಗವಹಿಸಿದ್ದಕ್ಕಾಗಿ ೩ ತಿಂಗಳ ಸಾದಾ ಶಿಕ್ಷೆ, ಆರು ವಾರಗಳ ಕಠಿಣ ಸೆರೆವಾಸದ ಶಿಕ್ಷೆ ಹಾಗೂ ೧೦೦ ರೂಪಾಯಿ ದಂಡ ಕೊಡದಿದ್ದುದಕ್ಕಾಗಿ ಹೆಚ್ಚುವರಿಯಾಗಿ ಇಪ್ಪತ್ತೆರಡು ದಿನಗಳ ಕಠಿಣ ಸೆರೆವಾಸ ಶಿಕ್ಷೆಯನ್ನು ಬೆಂಗಳೂರಿನ ಕೇಂದ್ರ ಕಾರಾಗೃಹದಲ್ಲಿ ಅನುಭವಿಸಿದರು.

## ಉಗ್ರಪ್ಪ

ತಾವರೆಕೆರೆಯಲ್ಲಿ ನಡೆದ ಅರಣ್ಯ ಸತ್ಯಾಗ್ರಹದಲ್ಲಿ ಭಾಗವಹಿಸಿದವರಲ್ಲಿ ಬ್ಯಾರಾಲು ಗ್ರಾಮದ ಹನುಮಂತಪ್ಪನವರ ಮಗ ಉಗ್ರಪ್ಪನವರೂ ಒಬ್ಬರಾಗಿದ್ದು. ಸತ್ಯಾಗ್ರಹದಲ್ಲಿ ಭಾಗವಹಿಸಿದ್ದಕ್ಕಾಗಿ ಪೊಲೀಸರಿಂದ ಬಂಧಿಸಲ್ಪಟ್ಟು ಇವರು ನಾಲ್ಕು ತಿಂಗಳ ಸಾದಾಶಿಕ್ಷೆ, ಆರು ವಾರಗಳ ಕಠಿಣ ಶಿಕ್ಷೆ ಹಾಗೂ ೧೨೫ ರೂ ದಂಡ ತೆರದಿದ್ದುದಕ್ಕಾಗಿ ಹೆಚ್ಚುವರಿಯಾಗಿ ಒಂದು ತಿಂಗಳ ಸಾದಾ ಶಿಕ್ಷೆ ಹಾಗೂ ಒಂದು ವಾರದ ಕಠಿಣ ಶಿಕ್ಷೆ ಸೇರಿ ಒಟ್ಟು ಆರುತಿಂಗಳು ಮೂರುವಾರಗಳ ಸೆರೆವಾಸ ಶಿಕ್ಷೆ ಅನುಭವಿಸಿದರು.

## ಕೆ ಭೀಮಯ್ಯ

ತಮ್ಮ ೨೨ನೇ ವಯಸ್ಸಿನಲ್ಲೇ ಸ್ವಾತಂತ್ರ್ಯ ಚಳುವಳಿಗಳಿಗೆ ಪದಾರ್ಪಣೆ ಮಾಡಿದ ಕ್ಯಾತ್ಸಂದ್ರದ ಕೆ. ಭೀಮಯ್ಯನವರು ಭಾಗವಹಿಸಿದ ಚಳುವಳಿಗಳಲ್ಲಿ ೧೯೩೯ರ ಅರಣ್ಯ ಸತ್ಯಾಗ್ರಹ ಮೊದಲನೆಯದಾಗಿದ್ದು, ತಾವರೆಕೆರೆಯ ಅರಣ್ಯ ಸತ್ಯಾಗ್ರಹದಲ್ಲಿ ಭಾಗವಹಿಸಿದ ಸಂದರ್ಭದಲ್ಲಿ ಬಂಧನಕ್ಕೊಳಗಾದ ಇವರು ಬೆಂಗಳೂರಿನ ಕೇಂದ್ರ ಕಾರಾಗೃಹ ಹಾಗೂ ಬೈರಮಂಗಲದ ಬಯಲು ಬಂಧೀಖಾನೆಗಳಲ್ಲಿ ಸೆರೆವಾಸ ಶಿಕ್ಷೆ ಅನುಭವಿಸಿದರು

## ಗಿರಿಯಪ್ಪ

ತಾವರೆಕೆರೆಯ ಗಿರಿಯಪ್ಪನವರು ತಮ್ಮ ೫೮ನೇ ವಯಸ್ಸಿನಲ್ಲಿ ತಮ್ಮ ಸ್ವಗ್ರಾಮದಲ್ಲಿ ಆರಂಭವಾದ ಅರಣ್ಯ ಸತ್ಯಾಗ್ರಹದಲ್ಲಿ ಪಾಲ್ಗೊಂಡು ಬೆಂಗಳೂರಿನ ಕೇಂದ್ರ ಕಾರಾಗೃಹದಲ್ಲಿ ಐದುವರೆ ತಿಂಗಳ ಕಠಿಣ ಸೆರೆವಾಸ ಶಿಕ್ಷೆ ಅನುಭವಿಸಿದರು.

## ಚಿಕ್ಕ ಭೈರಪ್ಪ

ತಾವರೆಕೆರೆಯ ಸಿದ್ದಪ್ಪನವರ ಸುಪುತ್ರರಾದ ಚಿಕ್ಕ ಭೈರಪ್ಪನವರು ತಮ್ಮೂರಿನಲ್ಲಿ ಆರಂಭವಾದ ಅರಣ್ಯ ಸತ್ಯಾಗ್ರಹದಲ್ಲಿ ಅತ್ಯುತ್ಸಾಹದಿಂದ ಪಾಲ್ಗೊಂಡು ಐದು ತಿಂಗಳ ಕಠಿಣ ಸೆರೆವಾಸ ಹಾಗೂ ೧೦೦ ರೂಪಾಯಿ ದಂಡ ತೆರದಿದ್ದುದಕ್ಕಾಗಿ ಒಂದೂವರೆ ತಿಂಗಳ ಹೆಚ್ಚುವರಿ ಶಿಕ್ಷೆಯೂ ಸೇರಿ ಒಟ್ಟು ಆರೂವರೆ ತಿಂಗಳ ಕಠಿಣ ಸೆರೆವಾಸದ ಶಿಕ್ಷೆ ಅನುಭವಿಸಿದರು.

## ತಿಮ್ಮ ನಾಯಕ

ತಾವರೆಕೆರೆಯ ದಾಸನಾಯಕನ ಮಗ ತಿಮ್ಮನಾಯಕ ಮತ್ತೊಬ್ಬ ಸ್ವಾತಂತ್ರ್ಯ ಹೋರಾಟಗಾರನಾಗಿದ್ದು ತಾವರೆಕೆರೆ ಅರಣ್ಯ ಸತ್ಯಾಗ್ರಹದಲ್ಲಿ ಭಾಗವಹಿಸಿದ ಈತ ಬೆಂಗಳೂರಿನ ಕೇಂದ್ರ ಕಾರಾಗೃಹದಲ್ಲಿ ಶಿಕ್ಷೆ ಅನುಭವಿಸಿದನು.

## ಪಾತಣ್ಣ

ಅರಣ್ಯ ಸತ್ಯಾಗ್ರಹದಲ್ಲಿ ಭಾಗವಹಿಸಿದ ತಾವರೆಕೆರೆಯ ಮರಿಲಿಂಗಪ್ಪನವರ ಮಗ ಪಾತಣ್ಣನು ಈ ಗ್ರಾಮದ ಮತ್ತೊಬ್ಬ ಸ್ವಾತಂತ್ರ್ಯ ಹೋರಾಟಗಾರನಾಗಿದ್ದು



ಸತ್ಯಾಗ್ರಹದಲ್ಲಿ ಭಾಗವಹಿಸಿದ್ದಕ್ಕಾಗಿ ಆರು ತಿಂಗಳ ಕಠಿಣ ಸೆರೆವಾಸದ ಶಿಕ್ಷೆ ಹಾಗೂ ನ್ಯಾಯಾಲಯ ವಿಧಿಸಿದ ೧೦೦ ರೂಪಾಯಿ ದಂಡ ತೆರಲು ನಿರಾಕರಿಸಿದುದಕ್ಕಾಗಿ ಹೆಚ್ಚುವರಿ ಒಂದೂವರೆ ತಿಂಗಳು ಸೇರಿ ಒಟ್ಟು ಏಳುವರೆ ತಿಂಗಳ ಕಠಿಣ ಸೆರೆವಾಸ ಶಿಕ್ಷೆಯನ್ನು ಬೆಂಗಳೂರಿನ ಕೇಂದ್ರ ಕಾರಾಗೃಹದಲ್ಲಿ ಅನುಭವಿಸಿದನು

## ಬಸಪ್ಪ

ತಾವರೆಕೆರೆಯ ಅಜ್ಜಯ್ಯನಮಗ ಬಸಪ್ಪ ೨೭ ವರ್ಷದ ಯುವಕನಾಗಿದ್ದು ೧೯೩೯ರಲ್ಲಿ ತನ್ನೂರಿನಲ್ಲಿ ಆರಂಭವಾದ ಅರಣ್ಯ ಸತ್ಯಾಗ್ರಹದಲ್ಲಿ ಉತ್ಸಾಹದಿಂದ ಭಾಗಿಯಾಗುವ ಮೂಲಕ ಆರುತಿಂಗಳ ಕಠಿಣ ಶಿಕ್ಷೆ ಹಾಗೂ ೫೦ರೂಪಾಯಿ ದಂಡ ತೆರಲು ನಿರಾಕರಿಸಿದುದಕ್ಕಾಗಿ ಹೆಚ್ಚುವರಿ ಒಂದು ತಿಂಗಳ ಶಿಕ್ಷೆ ಸೇರಿ ಒಟ್ಟು ಏಳುವರೆ ತಿಂಗಳ ಕಠಿಣ ಸೆರೆವಾಸ ಶಿಕ್ಷೆ ಅನುಭವಿಸಿದನು.

## ಬಾಲಯ್ಯ

ಅರಣ್ಯ ಸತ್ಯಾಗ್ರಹದಲ್ಲಿ ಭಾಗವಹಿಸಿದ ತಾವರೆಕೆರೆಯ ಹನುಮಜ್ಜನ ಮಗ ಬಾಲಯ್ಯ ಈ ಗ್ರಾಮದ ಮತ್ತೋರ್ವ ಸ್ವಾತಂತ್ರ್ಯ ಹೋರಾಟಗಾರನಾಗಿದ್ದು. ಹೋರಾಟದ ಸಂದರ್ಭದಲ್ಲಿ ಪೊಲೀಸರಿಂದ ಬಂಧಿಸಲ್ಪಟ್ಟು ಈತನು ಬೆಂಗಳೂರು ಮತ್ತು ಬೈರಮಂಗಲದ ಸೆರೆಮನೆಗಳಲ್ಲಿ ಐದು ತಿಂಗಳ ಕಠಿಣ ಶಿಕ್ಷೆ ಅನುಭವಿಸಿದನು.

## ಸಂಜೀವಪ್ಪ

ತಾವರೆಕೆರೆಯ ಹನುಮಂತಪ್ಪನವರ ಮಗ ಸಂಜೀವಪ್ಪ ಅರಣ್ಯ ಸತ್ಯಾಗ್ರಹದಲ್ಲಿ ಭಾಗವಹಿಸುವ ಮೂಲಕ ಐದು ತಿಂಗಳ ಸೆರೆವಾಸ ಹಾಗೂ ೧೦೦ ರೂಪಾಯಿ ದಂಡ ತೆರದಿದ್ದುದಕ್ಕಾಗಿ ಹೆಚ್ಚುವರಿ ಒಂದೂವರೆ ತಿಂಗಳು ಸೇರಿ ಒಟ್ಟು ಆರೂವರೆ ತಿಂಗಳ ಕಠಿಣ ಸೆರೆವಾಸದ ಶಿಕ್ಷೆ ಅನುಭವಿಸಿದನು.

## ಮಲ್ಲಯ್ಯ

ಅರಣ್ಯ ಸತ್ಯಾಗ್ರಹದಲ್ಲಿ ಭಾಗವಹಿಸಿದವರಲ್ಲಿ ತಾವರೆಕೆರೆಯ ನಾಗಣ್ಣನವರ ಮಗ ಮಲ್ಲಯ್ಯ ಒಬ್ಬರಾಗಿದ್ದು. ಇವರು ಚಳುವಳಿ ಸಂದರ್ಭದಲ್ಲಿ

ಬಂಧನಕ್ಕೊಳಗಾಗುವ ಮೂಲಕ ಒಟ್ಟು ಐದು ತಿಂಗಳು ಒಂದು ವಾರದ ಕಠಿಣ ಸೆರೆವಾಸ ಶಿಕ್ಷೆ ಅನುಭವಿಸ ಬೇಕಾಯಿತು.

**ಶೆಟ್ಟಿ ಕಾಂತಪ್ಪ**

ತಾವರೆಕೆರೆಯ ಶೆಟ್ಟಿ ರೇವಣ್ಣನವರ ಪುತ್ರ ಶೆಟ್ಟಿ ಕಾಂತಪ್ಪ ಅರಣ್ಯ ಸತ್ಯಾಗ್ರಹದಲ್ಲಿ ಭಾಗವಹಿಸಿದ ಪ್ರಮುಖ ಸ್ವಾತಂತ್ರ್ಯ ಹೋರಾಟಗಾರರಲ್ಲಿ ಒಬ್ಬರಾಗಿದ್ದು. ಚಳುವಳಿ ಸಂದರ್ಭದಲ್ಲಿ ಬಂಧಿತರಾದ ಇವರು ಬೆಂಗಳೂರಿನ ಕೇಂದ್ರ ಕಾರಾಗೃಹದಲ್ಲಿ ಒಟ್ಟು ಆರೂವರೆ ತಿಂಗಳು ಕಠಿಣ ಸೆರೆವಾಸ ಶಿಕ್ಷೆ ಅನುಭವಿಸಬೇಕಾಯಿತು

**ಸಿ.ಟಿ. ಹನುಮಂತಯ್ಯ**

ಶಿರಾದ ಕೃಷಿ ಇಲಾಖೆಯ ನೌಕರರಾಗಿದ್ದ ಸಿ.ಟಿ ಹನುಮಂತಯ್ಯನವರು ಕೂಡ ೧೯೩೯ರ ತಾವರೆಕೆರೆ ಅರಣ್ಯ ಸತ್ಯಾಗ್ರಹದಲ್ಲಿ ಭಾಗವಹಿಸಿದವರಲ್ಲಿ ಒಬ್ಬರಾಗಿದ್ದು ನಂತರದ ಚಳುವಳಿಗಳಲ್ಲೂ ಇವರು ಸಕ್ರಿಯವಾಗಿ ಪಾಲ್ಗೊಂಡರು

**ಆರ್ ಎಸ್ ಆರಾಧ್ಯರು**

ತುಮಕೂರು ಜಿಲ್ಲೆಯ ಅಪ್ರತಿಮ ಸ್ವಾತಂತ್ರ್ಯ ಹೋರಾಟಗಾರರೂ ಪತ್ರಿಕೋದ್ಯಮಿಯೂ ಆಗಿದ್ದು ಆರ್. ಎಸ್. ಆರಾಧ್ಯರು ಅರಣ್ಯ ಸತ್ಯಾಗ್ರಹದ ಸಂದರ್ಭದಲ್ಲಿ ತಮ್ಮ ಭೂಗತ ಪತ್ರಿಕೆಗಳ ಮೂಲಕ ಜನರನ್ನು ಜಾಗೃತಿಗೊಳಿಸುವುದರೊಂದಿಗೆ ಚಳುವಳಿಗೆ ತಮ್ಮದೇ ಆದ ಕಾಣಿಕೆ ನೀಡಿದರು

**ಕೆ.ವಿ. ಕೃಷ್ಣಸ್ವಾಮಿ**

ತನ್ನ ಸ್ನೇಹಿತ ಕಿಟ್ಟಪ್ಪನ ಜೊತೆ ಚಳುವಳಿಗಾಗಿ ಕುಣಿಗಲ್‌ನಿಂದ ತಾವರೆಕೆರೆ ಹೋಗಿದ್ದ ಕೆ.ವಿ ಕೃಷ್ಣಸ್ವಾಮಿ ಹಸ್ತಪ್ರತಿ ಪತ್ರಿಕೆಗಳ ಮೂಲಕ ಚಳುವಳಿಗಾರರಿಗೆ ಸುದ್ದಿ ಮುಟ್ಟಿಸುವ ಕಾರ್ಯದೊಂದಿಗೆ ಚಳುವಳಿಗೆ ತಮ್ಮದೇ ಆದ ರೀತಿಯಲ್ಲಿ ಕೊಡುಗೆ ನೀಡಿದರು.ಆದರೆ ನಂತರ ಪೊಲೀಸರ ಕೈಗೆ ಸಿಕ್ಕಹಾಕಿಕೊಂಡು ಇವರೂ ಕೂಡ ಕೆಲಕಾಲ ಸೆರೆವಾಸ ಅನುಭವಿಸಬೇಕಾಯಿತು.



ಈ ಕೆಲ ಪ್ರಮುಖ ನಾಯಕರು ಮತ್ತು ಚಳುವಳಿಗಾರರ ಜೊತೆ ಜಿಲ್ಲೆಯ ಎಲ್ಲ ಭಾಗಗಳಿಂದ ಬಂದಿದ್ದ ಅನೇಕ ನಾಯಕರು ಮತ್ತು ಚಳುವಳಿಗಾರರು ತಾವರೆಕೆರೆಯಲ್ಲಿ ನಡೆದ ಅವಿಸ್ಮರಣೀಯ ಅರಣ್ಯ ಸತ್ಯಾಗ್ರಹದ ಯಶಸ್ಸಿಗೆ ಪ್ರಮುಖ ಕಾರಣರಾಗಿದ್ದು. ಈ ಚಳುವಳಿಯ ಮೂಲಕ ರಾಷ್ಟ್ರದ ಸ್ವಾತಂತ್ರ್ಯ ಹೋರಾಟದ ಇತಿಹಾಸದಲ್ಲಿ ಶಿರಾ ತಾಲ್ಲೂಕಿನ ತಾವರೆಕೆರೆಗೆ ಮಹತ್ವದ ಸ್ಥಾನ ದೊರಕಿಸಿಕೊಟ್ಟಿದ್ದಾರೆ. ರಾಷ್ಟ್ರದ ಸ್ವಾತಂತ್ರ್ಯಕ್ಕಾಗಿ ತಮ್ಮ ಸರ್ವಸ್ವವನ್ನೂ ತ್ಯಾಗ ಮಾಡಿ ಹೋರಾಡಿದ ಇವರೆಲ್ಲರಿಗೂ 'ಸ್ವಾತಂತ್ರ್ಯದ ಅಮೃತೋತ್ಸವ'ದ ಶುಭ ಸಂದರ್ಭದಲ್ಲಿ ಗೌರವ ಪೂರ್ವಕ ನಮನಗಳು.

❑

## ಗ್ರಂಥಋಣ


ಕೃಷ್ಣರಾವ್ ಎಂ.ವಿ., ಕೇಶವಭಟ್ – ಕರ್ನಾಟಕ ಇತಿಹಾಸ ದರ್ಶನ ಕರ್ನಾಟಕ ಸಹಕಾರಿ ಪ್ರದರ್ಶನ ಮಂದಿರ, ಬೆಂಗಳೂರು.

ಭಾಸ್ಕರಪ್ಪ ಸಿ.ಎನ್. (ಸಂ) ತುಮಕೂರು ಜಿಲ್ಲಾ ದರ್ಶನ ಟೈಮ್ಸ್ ಪಬ್ಲಿಕೇಶನ್ಸ್, ತುಮಕೂರು.

ಪ್ರೊ. ಮಾಲಿ ಮುದ್ದಣ್ಣ (ಸಂ) ಮರೆಯಲಾಗದ ಮಾಲಿ ಮರಿಯಪ್ಪ ಕೆ.ಆರ್.ಎಸ್. ಪ್ರತಿಷ್ಠಾನ ಅಮೆರಿಕ.

ಡಾ. ನಂದೀಶ್ವರ ಎನ್. ಸಿರಾ ತಾಲ್ಲೂಕು ದರ್ಶನ ಪೂರ್ಣಚಂದ್ರ ತೇಜಸ್ವಿ ಪ್ರಕಾಶನ, ಸಿರಾ.

ಸೂರ್ಯನಾಥ ಕಾಮತ್ ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು ಸಂಪುಟ ೨ ಮತ್ತು ೩ ಕನ್ನಡ ಮತ್ತು ಸಂಸ್ಕರತಿ ನಿರ್ದೇಶನಾಲಯ, ಬೆಂಗಳೂರು.

ಆರಾಧ್ಯ ಆರ್.ಎಸ್. (ಸಂ) ತುಮಕೂರು ಜಿಲ್ಲಾ ವಿಶೇಷ ಅಧಿವೇಶನ

ಡಾ. ನಾಗರತ್ನಮ್ಮ ಎಸ್. ತುಮಕೂರು ಜಿಲ್ಲೆಯಲ್ಲಿ ಸ್ವಾತಂತ್ರ್ಯ ಚಳುವಳಿ ದೇಸಿ ಪ್ರಕಾಶನ, ಬೆಂಗಳೂರು.

ಕರ್ನಾಟಕ ಗ್ಯಾಜೆಟಿಯರ್ ಇಲಾಖೆ, ತುಮಕೂರು ಜಿಲ್ಲಾ ಗ್ಯಾಜೆಟಿಯರ್, ಕಾಂಗ್ರೆಸ್ ಮೀಟಿಂಗ್ಸ್ ಇನ್ ತುಮಕೂರು ಡಿಸ್ಟ್ರಿಕ್ಟ್ (ಕರಾಪಿ) ಬೆಂಗಳೂರು. ಫಾರೆಸ್ಟ್ ಸತ್ಯಾಗ್ರಹ ಇನ್ ತುಮಕೂರು ಡಿಸ್ಟ್ರಿಕ್ಟ್ ದಿನಾಂಕ: ೨೯–೯–೧೯೩೯ ರಿಂದ ೨೯–೧೨–೧೯೩೯.

ಪ್ರೊ. ಕೆ. ಪುಟ್ಟರಂಗಪ್ಪ, ವೀರಪಥ





ಪ್ರೊ. ಕೆ. ಪುಟ್ಟರಂಗಪ್ಪ, ತುಮಕೂರಿನ ವೀರವನಿತೆಯರು.

ಪ್ರೊ. ಕೆ. ಪುಟ್ಟರಂಗಪ್ಪ, ತುಮಕೂರು ಜಿಲ್ಲೆಯಲ್ಲಿ ಸ್ವಾತಂತ್ರ್ಯ ಚಳುವಳಿ (ಅಪ್ರಕಟಿತ ಕೃತಿ).


## ಸ್ಮರಣ ಸಂಚಿಕೆಗಳು


- ತುಮಕೂರು ಜಿಲ್ಲಾ ಸ್ವಾತಂತ್ರ್ಯ ಹೋರಾಟಗಾರರ ಸಂಘ (ರಿ.) ತುಮಕೂರು, ತುಮಕೂರು ಚಲೇಜಾವ್ ಚಳುವಳಿ ೫೦ನೇ ವಾರ್ಷಿಕೋತ್ಸವ ಸ್ಮರಣ ಸಂಚಿಕೆ ೧೯೯೨.
- ತುಮಕೂರು ವಾರ್ತೆ ತ್ರಿದಶಮಾನೋತ್ಸವ ವಿಶೇಷಾಂಕ, ೨೦೧೨, ಜಯಮಂಗಲಿ.
- ೪೯ನೇ ಕನ್ನಡ ಸಾಹಿತ್ಯ ಸಮ್ಮೇಳನ ಸ್ಮರಣ ಸಂಚಿಕೆ–ಕಸಾಪ–ಬೆಂಗಳೂರು–೨೦೦೨.
- ತಾಳಕೆರೆ ಸುಬ್ರಹ್ಮಣ್ಯ, ತಾಳಕೆರೆ ಸುಬ್ರಹ್ಮಣ್ಯ ಅಭಿನಂದನಾ ಗ್ರಂಥ ಸಮಿತಿ, ತುಮಕೂರು.
- ಕರ್ನಾಟಕದ ಸ್ವಾತಂತ್ರ್ಯ ಹೋರಾಟಗಾರರು.
- ಕರ್ನಾಟಕ ರಾಜ್ಯ ಸ್ವಾತಂತ್ರ್ಯ ಹೋರಾಟಗಾರರು ಮತ್ತು ಉತ್ತರಾಧಿಕಾರಿಗಳ ಸಂಸ್ಥೆ, ಬೆಂಗಳೂರು ೧೯೯೩.

# ಅನುಬಂಧ

## ಛಾಯಾಚಿತ್ರಗಳು









ತಾವರೆಕೆರೆ ಅರಣ್ಯ ಸತ್ಯಾಗ್ರಹದ ಸರ್ವಾಧಿಕಾರಿ ಶ್ರೀ ಮಾಲಿಮರಿಯಪ್ಪ



ತಾವರೆಕೆರೆ ಅರಣ್ಯ ಸತ್ಯಾಗ್ರಹದ ನಾಯಕ ಟಿ. ತಾರೆಗೌಡ

ತಾವರೆಕೆರೆ ಅರಣ್ಯ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದ ಪ್ರಮುಖ ಸ್ವಾತಂತ್ರ್ಯ ಹೋರಾಟಗಾರರು






## ತಾವರೆಕೆರೆ ಅರಣ್ಯ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದ ಪ್ರಮುಖ ಸ್ವಾತಂತ್ರ್ಯ ಹೋರಾಟಗಾರರು




Scanned by TapScanner
Scanned by TapScanner

## ಅಮೃತ ಮಹೋತ್ಸವ ಪ್ರಕಟಣೆ – ೭೫ ಕಿರುಪುಸ್ತಕಗಳ ಪಟ್ಟಿ
## ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ

| ಕ್ರಸಂ. | ಪುಸ್ತಕದ ಹೆಸರು | ಲೇಖಕರ ಹೆಸರು | ಬೆಲೆ |
|---|---|---|---|
| ೧. | ತುರುವನೂರು | ಡಾ. ಪಿ. ಯಶೋದಾ ರಾಜಶೇಖರಪ್ಪ | ೩೦/– |
| ೨. | ಚಿತ್ರದುರ್ಗ | ಡಾ. ಬಿ. ರಾಜಶೇಖರಪ್ಪ | ೩೦/– |
| ೩. | ರಾಮಸ್ವಾಮಿ ವೃತ್ತ | ಮಂಜುನಾಥ ಹೆಚ್.ಎಲ್. | ೩೦/– |
| ೪. | ಸುಬ್ಬರಾಯನ ಕೆರೆ | ಡಾ. ಇಂದಿರಾ ಬಿ.ಪಿ. | ೩೦/– |
| ೫. | ಬದನವಾಳು | ಡಾ. ಇಂದಿರಾ ಬಿ.ಪಿ. | ೩೦/– |
| ೬. | ತಗಡೂರು | ಡಾ. ಎಚ್.ಎಸ್. ಉಷಾರಾಣಿ | ೩೦/– |
| ೭. | ಶಿವಪುರ | ಡಾ. ಲಿಂಗರಾಜು | ೩೦/– |
| ೮. | ಮಂಡ್ಯ | ಡಾ. ಶಿವರಾಮು ಎಸ್. | ೩೦/– |
| ೯. | ಚಾಮರಾಜನಗರ | ಡಾ. ಸುಂದ್ರೇಶ ಎನ್. | ೩೦/– |
| ೧೦. | ಗುಂಡ್ಲುಪೇಟೆ | ಕವಿತಾ ಎ. | ೩೦/– |
| ೧೧. | ಗೊರೂರು | ಡಾ. ಯೋಗೇಶ್ ಎನ್.ಇ. | ೩೦/– |
| ೧೨. | ಅರಸೀಕೆರೆ | ಡಾ. ಮಂಜುನಾಥ ಜಿ.ಆರ್. | ೩೦/– |
| ೧೩. | ಹೊಸರಿತ್ತಿ | ಡಾ. ಹೇಮಪ್ಪ ಬ. ಕೆಂಚಳ್ಳಿ | ೩೦/– |
| ೧೪. | ಕನ್ನೇಶ್ವರ | ಡಾ. ಚಾಮರಾಜ ಕಮ್ಮಾರ | ೩೦/– |
| ೧೫. | ಚಳ್ಳಕೂಡ್ಲೂರು | ರಾಮಣ್ಣ ಹವಳೆ | ೩೦/– |
| ೧೬. | ನ್ಯಾಷನಲ್ ಹೈಸ್ಕೂಲು | ಟಿ.ಕೆ. ತಿಮ್ಮರಾಜ ಶೆಟ್ಟಿ | ೩೦/– |
| ೧೭. | ಬನಪ್ಪ ಪಾರ್ಕ್ | ರಮೇಶ ದೊಡ್ಡಪುರ | ೩೦/– |

| | | | |
|---|---|---|---|
| ೧೮. | ಮಲ್ಲೇಶ್ವರ | ಕೆ.ಎಲ್. ನಟರಾಜ್ | ೩೦/– |
| ೧೯. | ದಂಡುಪ್ರದೇಶ | ಪ್ರಮೋದ್ ನ. ಗೋ. | ೩೦/– |
| ೨೦. | ದೇವನಹಳ್ಳಿ | ಕೆ.ಆರ್. ನರಸಿಂಹನ್ | ೩೦/– |
| ೨೧. | ದೊಡ್ಡಬಳ್ಳಾಪುರ | ಡಿ.ಎಂ. ಘನಶ್ಯಾಮ | ೩೦/– |
| ೨೨. | ರಾಮನಗರ | ಎಸ್. ಶರತ್ ಚಂದ್ರ | ೩೦/– |
| ೨೩. | ಕನಕಪುರ | ಡಾ. ಎಸ್.ಎಚ್. ಭುವನೇಶ್ವರ | ೩೦/– |
| ೨೪. | ಶ್ರೀನಿವಾಸಪುರ | ಪ್ರೊ. ಕೆ.ಆರ್. ಜಯಶ್ರೀ | ೩೦/– |
| ೨೫. | ಬಂಗಾರಪೇಟೆ | ಪ್ರೊ. ಕೆ.ಆರ್. ಜಯಶ್ರೀ | ೩೦/– |
| ೨೬. | ವಿದುರಾಶ್ವತ್ಥ | ಡಾ. ಎಸ್.ಜಿ. ರಾಮದಾಸ ರೆಡ್ಡಿ | ೩೦/– |
| ೨೭. | ಈಸೂರು | ಮಾರ್ಪಳ್ಳಿ ಆರ್. ಮಂಜುನಾಥ್ | ೩೦/– |
| ೨೮. | ನಗರ(ಬಿದನೂರು) | ಚಿನ್ಮಯ ಎಂ.ಸಿ. | ೩೦/– |
| ೨೯. | ಚನ್ನಗಿರಿ | ಡಾ. ಕೆಳದಿ ವೆಂಕಟೇಶ ಜೋಯಿಸ್ | ೩೦/– |
| ೩೦. | ದಾವಣಗೆರೆ | ಸಹನಾ ಚೇತನ್ | ೩೦/– |
| ೩೧. | ಸಿಂದಗಿ | ಡಾ. ರಮೇಶ ಎಸ್. ಕತ್ತಿ | ೩೦/– |
| ೩೨. | ಮಸಬಿನಾಳ | ಶಂಕರ ಬೈಚಬಾಳ | ೩೦/– |
| ೩೩. | ಸಾರವಾಡ | ಡಾ. ಸೋಮಶೇಖರ ವಾಲಿ | ೩೦/– |
| ೩೪. | ಹಲಸಂಗಿ | ಶ್ರೀ ಸುಮಿತ್ ಮೇತ್ರಿ | ೩೦/– |
| ೩೫. | ನರಗುಂದ | ಡಾ. ನಿಂಗು ಸೊಲಗಿ | ೩೦/– |
| ೩೬. | ಮುಂಡರಗಿ | ಡಾ. ಉಮೇಶ ತಿಮ್ಮಾಪುರ | ೩೦/– |



| | | | |
|---|---|---|---|
| ೩೭. | ಹಲಗಲಿ | ಡಾ. ವಿಜಯಶ್ರೀ ಇಟ್ಟಣ್ಣವರ | ೩೦/– |
| ೩೮. | ಬಿಸನಾಳ | ಡಾ. ವಿನಯಕುಮಾರ್ ಹಿರೇಮಠ | ೩೦/– |
| ೩೯. | ಬಾಗಲಕೋಟೆ | ರಾಮ ಮನಗೂಳಿ | ೩೦/– |
| ೪೦. | ಬಾದಾಮಿ | ಡಾ. ಪ್ರಕಾಶ ಗ. ಖಾಡೆ | ೩೦/– |
| ೪೧. | ಸುರಪುರ | ಶ್ರೀನಿವಾಸ ಜಾಲವಾದಿ | ೩೦/– |
| ೪೨. | ಕೆಂಭಾವಿ | ನಿಂಗನಗೌಡ ಹ. ದೇಸಾಯಿ | ೩೦/– |
| ೪೩. | ರಾಜನಕೋಳೂರು | ರಾಘವೇಂದ್ರ ಜಹಗೀರದಾರ | ೩೦/– |
| ೪೪. | ಭಾಲ್ಕಿ | ಡಾ. ರಘುಶಂಖ ಭಾತಂಬ್ರಾ | ೩೦/– |
| ೪೫. | ಗೋರಟಾ | ಷ.ಬ್ರ. ಡಾ. ರಾಜಶೇಖರ ಶಿವಾಚಾರ್ಯ ಸ್ವಾಮಿಗಳು | ೩೦/– |
| ೪೬. | ಕೇಂದ್ರ ಮೈದಾನ | ಡಾ. ವಸಂತಕುಮಾರ್ ಪೆರ್ಲ | ೩೦/– |
| ೪೭. | ರಾಮಶಾಲಾ ಬಯಲು | ರಾಮಣ್ಣ ಹವಳೆ | ೩೦/– |
| ೪೮. | ಉಳ್ಳಾಲ | ಡಾ. ಜ್ಯೋತಿ ಚೇಳ್ಯಾರು | ೩೦/– |
| ೪೯. | ಅಮರಸುಳ್ಯ | ಸಹನಾ ಕಾಂತಬೈಲು | ೩೦/– |
| ೫೦. | ಅಜ್ಜರಕಾಡು ಮೈದಾನ | ಡಾ. ಪೃಥ್ವೀರಾಜ ಕವತ್ತಾರು | ೩೦/– |
| ೫೧. | ಬಸರೂರು–ಕುಂದಾಪುರ | ಮಂಜುನಾಥ್ ಚಾಂದ್ | ೩೦/– |
| ೫೨. | ಪೊನ್ನಂಪೇಟೆ | ಸೊಮೆಯಂಡ ಕೌಸಲ್ಯ ಸತೀಶ್ | ೩೦/– |
| ೫೩. | ಮಡಿಕೇರಿ | ಪ್ರೊ. ಕೆ.ಆರ್. ದೀಕ್ಷಿತ್ | ೩೦/– |
| ೫೪. | ಅಜ್ಜಂಪುರ | ಚಿ.ಸ. ಪ್ರಭುಲಿಂಗ ಶಾಸ್ತ್ರಿ | ೩೦/– |
| ೫೫. | ಚಿಕ್ಕಮಗಳೂರು | ಚಿ.ಸ. ಪ್ರಭುಲಿಂಗ ಶಾಸ್ತ್ರಿ | ೩೦/– |

೫೬ / ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ – ತಾವರೆಕೆರೆ

| | | | |
|---|---|---|---|
| ೫೬. | ಕಲಬುರಗಿ | ಡಾ. ಶಂಭುಲಿಂಗವಾಣಿ | ೩೦/– |
| ೫೭. | ಮುಧೋಳ–ಸೇಡಂ | ಮುಡಬಿ ಗುಂಡೇರಾವ | ೩೦/– |
| ೫೮. | ಅಂಕೋಲಾ | ಶಾಂತಾರಾಮ ನಾಯಕ | ೩೦/– |
| ೫೯. | ಶಿರಸಿ | ಪದ್ಮಾಕರ ಮಡಗಾಂವಕರ | ೩೦/– |
| ೬೦. | ಕಾರವಾರ | ಡಾ. ಉದಯ ಶಂಕರ ಪುರಾಣಿಕ | ೩೦/– |
| ೬೧. | ಬಳ್ಳಾರಿ | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೨. | ಹೊಸಪೇಟೆ | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೩. | ಕೊಟ್ಟೂರು | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೪. | ಕೂಡ್ಲಿಗಿ | ಡಾ. ಕೆ. ಸತೀಶ | ೩೦/– |
| ೬೫. | ಕಿತ್ತೂರು | ಪ್ರಕಾಶ ಗಿರಿಮಲ್ಲನವರ | ೩೦/– |
| ೬೬. | ಹುದಲಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೭. | ಬೆಳಗಾವಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೮. | ಹುಲಕುಂದ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೯. | ಬೆಂಗೇರಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೭೦. | ಕೊಪ್ಪಳ | ಮಹೇಶ ಬಳ್ಳಾರಿ | ೩೦/– |
| ೭೧. | ಗಂಗಾವತಿ | ರಮೇಶ ಸಿ. ಬನ್ನಿಕೊಪ್ಪ | ೩೦/– |
| ೭೨. | ಅಳವಂಡಿ | ಡಾ. ಪ್ರಕಾಶ ಬಳ್ಳಾರಿ | ೩೦/– |
| ೭೩. | ತುಮಕೂರು | ಡಾ. ಬಿ. ನಂಜುಂಡಸ್ವಾಮಿ | ೩೦/– |
| ೭೪. | ಮಧುಗಿರಿ | ಡಾ. ಬಿ. ನಂಜುಂಡಸ್ವಾಮಿ | ೩೦/– |
| ೭೫. | ತಾವರೆಕೆರೆ | ಪ್ರೊ. ಕೆ. ಪುಟ್ಟರಂಗಪ್ಪ | ೩೦/– |